ಬಂಥರ್ಗಿಸಿಯಿರಹನ ಸಾರೇ

# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34** ನಿಜ ಜ್ಯೇಷ್ಠ – June-July 2007 **ಸಂಚಿಕೆ : 04**

ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

**ಹಾಗೂ**

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ವಿದ್ವಾನ್ ಶ್ರೀ ಗುಂಜಳ್ಳಿ. ನರಹರಿ ಆಚಾರ್ಯ**
**ಶ್ರೀ ಬಿ.ಎ. ಪಾಟೀಲ್**

ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ** – 08512-279887 — **ಮೊಬೈಲ್** – 099857-03033

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
080-41146081, 9341387714, 9342651516

## ವಿಷಯಸೂಚೀ


ಮಂಗಳಾಚರಣೆ ೦೩
ಸಂಪಾದಕೀಯ ೦೪

**ಲೇಖನಮಾಲಾ**

ಗೀತಾವಿವೃತಿ — ಡಾ. ಆರ್.ಜಿ. ಮಾಳಗಿ ೦೬
ಮಾಧ್ವವಾಙ್ಮಯದಲ್ಲಿ ಮೋಕ್ಷಸ್ವರೂಪ — ಕಡಪ. ರಾಘವೇಂದ್ರಾಚಾರ್ಯ ೧೩
ಮಹಾಭಾರತದಲ್ಲಿ ಭೀಷ್ಮರ ಸ್ಥಾನ — ವಿ. ರಮೇಶಾಚಾರ್ಯ ೧೮
ಶ್ರೀರಾಮಚಾರಿತ್ರ್ಯಮಂಜರೀಯ ವೈಶಿಷ್ಟ್ಯ — ಎಲ್. ಕೃಷ್ಣಾಚಾರ್ಯ ೨೪
ಋಗ್ವೇದಕಾಲೀನ ದೇವತೆಗಳು
(ಆಧುನಿಕರ ವಿದ್ವಾಂಸರ ದೃಷ್ಟಿಯಲ್ಲಿ) — ಡಾ. ಕೊರಟಗೆರೆ ವಾಸುದೇವಾಚಾರ್ಯ ೨೭
ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ — ಪಂ. ಆನಂದತೀರ್ಥಾಚಾರ್ಯ ೩೨
ಕಲಿಯುಗದ ಸಂತಾನ — ಡಾ. ಪಾಂಡುರಂಗ ಜೋರಾಪುರ ೩೫
ಮುಕ್ತಿಃ ನೈಜಸುಖಾನುಭೂತಿಃ — ವರದರಾಜ ಗುತ್ತಲ ೩೯
ತಮಿಳುನಾಡಿನ ನವಗ್ರಹ ದೇವಾಲಯಗಳು — ಸಂಗ್ರಹ : ಸೂರೀಂದ್ರ ೪೩
ಇಣುಕುನೋಟ ೪೫
ಪರ್ಯಟನೆ ೪೮


**[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]**

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

# ಮಂಗಳಾಚರಣೆ

ತುಂಗಕುಲ ಗುರುವರನ ಹೃತ್ಕಮಲದಲಿ ನಿಲಿಸಿ ಭಂಗವಿಲ್ಲದ ಸುಖವ ಸುಜನಕೆಲ್ಲ
ಹಿಂಗದೆ ಕೊಡುವ ನಮ್ಮ ಮಧ್ವಾಂತರಾತ್ಮಕ **ರಂಗವಿಠ್ಠಲ**ನೆಂದು ನೆರೆ ಸಾರಿರೈ ॥

**– ಶ್ರೀಶ್ರೀಪಾದರಾಜರು**

ಶ್ರೀಮದ್ವೀರನೃಸಿಂಹನಾಮನೃಪತೇರ್ಭೂದೇವ ಹತ್ಯಾವ್ಯಥಾಮ್ ।
ದೂರೀಕೃತ್ಯ ತದರ್ಪಿತೋಜ್ಜ್ವಲಮಹಾಸಿಂಹಾಸನೇ ಸಂಸ್ಥಿತಃ ॥
ಶ್ರೀಮತ್ಪೂರ್ವಕವಾಟನಾಮಕಪುರೇ ಸರ್ವೇಷ್ಟಸಿದ್ಧಿಪ್ರದಃ ।
**ಶ್ರೀಶ್ರೀಪಾದಯತೀಂದ್ರ**ಶೇಖರಮಣೇ ಭೂಯಾತ್ಸ ನಃ ಶ್ರೇಯಸೇ ॥

**– ಶ್ರೀವಿಜಯೀಂದ್ರತೀರ್ಥರು**

ಚಾತುರ್ಯೈಕಾಕೃತಿರ್ಯಶ್ಚತುರಧಿಕಶತಗ್ರಂಥರತ್ನಪ್ರಣೇತಾ ।
ಧೂತಾರಾತಿಪ್ರಬಂಧಃ ಸ್ಫುಟವಿದಿತಚತುಃಷಷ್ಠಿವಿದ್ಯಾವಿಶೇಷಃ ॥
ಸೋಽಯಂ ನಃ ಶ್ರೀಸುರೇಂದ್ರವ್ರತಿವರತನಯೋದ್ವೈತಶೈವಾಸಹಿಷ್ಣುಃ ।
ಪುಷ್ಣಾತು ಶ್ರೀ**ಜಯೀಂದ್ರ**ಸ್ತ್ರಿಭುವನವಿದಿತಃ ಸರ್ವತಂತ್ರಸ್ವತಂತ್ರಃ ॥

**– ಶ್ರೀವಾದೀಂದ್ರತೀರ್ಥರು**

ರಾಘವೇಂದ್ರಾರ್ಪಿತಧಿಯೇ ಯೋಗೀಂದ್ರಾರ್ಪಿತಸೂನವೇ ।
**ಶ್ರೀಮತ್ಸೂರೀಂದ್ರ**ಯತಯೇ ಸುತಪೋನಿಧಯೇ ನಮಃ ॥

ವಂದಾರುಜನಸಂದೋಹಮಂದಾರತರುಸನ್ನಿಭಮ್ ।
ವೃಂದಾರಕಗುರುಪ್ರಖ್ಯಂ ವಂದೇ **ವಾದೀಂದ್ರ** ದೇಶಿಕಮ್॥

## ಶ್ರೀಸುಶಮೀಂದ್ರವಾಣಿ

**ಕೆಲವೊಮ್ಮೆ ಏನೇನೋ ನಿರೀಕ್ಷೆಗಳನ್ನಿಟ್ಟುಕೊಂಡ ಜನರು ವಿವಿಧ ಫಲಗಳ ಅಪೇಕ್ಷೆಯಲ್ಲಿರುತ್ತಾರೆ. ಆದರೆ ಅವುಗಳು ಪ್ರಾರಬ್ಧಕರ್ಮಾನುಸಾರ ಯಾರಿಗೆ ಎಷ್ಟು ಸಿಗಬೇಕೋ ಅಷ್ಟೇ ಸಿಗುತ್ತವೆ. ಪಕ್ಕದವರಿಗೆ ಎಷ್ಟು ಸಿಕ್ಕಿತೋ ಅಷ್ಟು ತಮಗೆ ಸಿಗಲಿಲ್ಲವೆಂದು ಹಳಿದುಕೊಳ್ಳಬಾರದು.**

**ಏಕೆಂದರೆ, ಮೋಡಗಳ ನೀರು ದಿಕ್ಕುಗಳು ತುಂಬುವಷ್ಟು ಎಲ್ಲೆಡೆ ಬಿದ್ದರೂ ನೀರಿಗಾಗಿ ಬಾಯ್ದೆರೆದು ನಿಂತ ಚಾತಕಪಕ್ಷಿಯ ಬಾಯಿಯಲ್ಲಿ ನಾಲ್ಕೋ ಐದೋ ಹನಿಗಳು ಮಾತ್ರ ಬೀಳುತ್ತವೆ. ಅದೂ ಸಹ ಅಷ್ಟು ಮಾತ್ರದಿಂದಲೇ ತೃಪ್ತಿಯನ್ನು ಹೊಂದುತ್ತದೆ. ಜೀವನದಲ್ಲಿ ಸಂತೃಪ್ತಿ ಇರಬೇಕು.**



# ಸಂಪಾದಕೀಯ

ನಮ್ಮ ಮಠಗಳಲ್ಲಿ ನಡೆಯುವ ಕೆಲ ಚಿಕ್ಕ-ಪುಟ್ಟ ಘಟನೆಗಳಿಂದ ತಿಳಿದುಬರುವ ಸೂಕ್ಷ್ಮವಾದ ವಿಷಯ ಒಂದಿದೆ. ಅದೆಂದರೆ-

ಆಧ್ಯಾತ್ಮಿಕತೆಯೆಡೆಗೆ ನಮ್ಮ ಮನಸ್ಸಿನ ಒಂದು ಮೂಲೆಯಲ್ಲಿ ಗೌರವ ಭಾವನೆ ಇರುತ್ತದೆಯೇ? ಕಾರಣಾಂತರದಿಂದ ಅದರೆಡೆಗೆ ಹೋಗದವರು ಪಶ್ಚಾತ್ತಾಪಪಡುತ್ತಿದ್ದಾರೆಯೇ?


ಹೌದು! ಪ್ರತಿನಿತ್ಯವೂ ನಮ್ಮ ನೂರಾರು ಮಠಗಳಿಗೆ ಭೇಟಿಕೊಡುವ ಸಾವಿರಗಟ್ಟಲೆಯ ಉನ್ನತ ಮಟ್ಟದ ಅಧಿಕಾರಿಗಳು, ನೂರಾರು ಜನ ಶ್ರೀಮಂತರು ಉನ್ನತ ಪದವಿಯಲ್ಲಿದ್ದು, ದೊಡ್ಡ ದೊಡ್ಡ ಹವಾನಿಯಂತ್ರಿತ ಬಂಗಲೆಗಳಲ್ಲಿದ್ದು, ವೈಭವೋಪೇತವಾದ ವಾಹನಗಳಲ್ಲಿ ತಿರುಗುತ್ತಾ ಆಳು-ಕಾಳು- ಗಳಿಂದ ಸೇವೆ ಪಡೆಯುತ್ತಿರುವ ಸ್ಥಿತಿವಂತರಾಗಿರುತ್ತಾರೆ. ನಮಗೆ ಇವರನ್ನು ಕಂಡಾಗ ಏನು ಅದೃಷ್ಟವೋ ಇವರದು? ಎನಿಸುತ್ತದೆ. ಆದರೆ ಈ ಭಕ್ತರು ಶ್ರೀಮಠಗಳಲ್ಲಿ ಸಿಬ್ಬಂದಿಗಳಾಗಿದ್ದು, ರಾಯರ ಸೇವೆ ಮಾಡುವ ನಮ್ಮನ್ನು ಕಂಡು ಏನು ಅದೃಷ್ಟವೋ ಇವರದು? ಎಂದು ಅಂದುಕೊಳ್ಳುತ್ತಾರೆ. ತಮಗೆ ಇಂತಹಾ ಅವಕಾಶ ದೊರೆಯದಿರುವ ಬಗ್ಗೆ ನಿರಾಶರಾಗುತ್ತಾ, ತಮ್ಮ ಸ್ಥಾನ-ಮಾನ, ಸುಖಗಳೆಲ್ಲವೂ ಮಠದಲ್ಲಿ ಸೇವೆ ಸಲ್ಲಿಸುವವರಿಗಿಂತ ಹೆಚ್ಚಿನದಲ್ಲವೆಂದೂ ಮನಃಪೂರ್ವಕವಾಗಿ ಭಾವಿಸುವುದಲ್ಲದೇ, ಆ ಅಭಿಪ್ರಾಯವನ್ನು ಕೂಡಾ ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ ಸಹ. ವೇದಾಭ್ಯಾಸ, ಸಂಸ್ಕೃತಾಭ್ಯಾಸ ಮಾಡುವ ಬಾಲಕರನ್ನು ಕಂಡಾಗಲಂತೂ ಜೀವನೋಪಾಯಕ್ಕಾಗಿ ಅನಿವಾರ್ಯವಾಗಿ ತಾವು ಲೌಕಿಕ ವಿದ್ಯಾಭ್ಯಾಸದ ಮೊರೆ ಹೋಗಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರಿಂದ ಆಧ್ಯಾತ್ಮಿಕ ವಿದ್ಯೆಯ ಸ್ಪರ್ಶವೇ ತಮಗಾಗದೇ ತೀರ್ಥ-ಹಸ್ತೋದಕ- ಗಳಿಲ್ಲದೇ ಉಂಡು ಅರ್ಧ ಜೀವನ ಕಳೆದೆವೆಂದು ಪರಿತಪಿಸು- ವವರನ್ನು ಕಂಡಾಗ ನಮಗೆ ಆಶ್ಚರ್ಯವಾಗುತ್ತದೆ. ಅಂದರೆ ಇದುವರೆಗೆ ಅನುಭವಿಸಿದ್ದು ಸುಖವಲ್ಲವೆಂದಾಯಿತು. ಹಾಗಾದರೆ, ಈ ಜನರು ಯಾವುದನ್ನು ಸುಖ- ವೆನ್ನುತ್ತಾರೆ? ಎಂದರೆ, ಇವರು ಲೌಕಿಕದಲ್ಲಿ ಸಿಗುತ್ತಿರುವ ಅಧಿಕಾರ, ಸುಖ-ಸಂತೋಷಗಳನ್ನು ಅನುಭವಿಸು- ತ್ತಿದ್ದರೂ ಆಧ್ಯಾತ್ಮದ ಚಟುವಟಿಕೆಗಳಾದ ಪೂಜೆ-ಜಪ-ಹೋಮಾದಿಗಳೆಡೆಗೆ ಗಮನಕೊಡುತ್ತಿದ್ದಾರೆ ಎಂದಾಯಿತು. ಹಿಂದೆ ಅನುಭವಿಸಿದ ಆ ವೈಭವದ ಸುಖಗಳನ್ನು ನೆನೆಸಿಕೊಂಡ ಇವರು ಜೀವನ ಸಾರ್ಥಕವಾಯಿತೆಂದು ಅಂದುಕೊಳ್ಳುತ್ತಿಲ್ಲ. ನೆಮ್ಮದಿ ಏನಿದ್ದರೂ ಆಧ್ಯಾತ್ಮಿಕದಲ್ಲೇ ಎನ್ನುತ್ತಾರೆ.

ಹೌದು! ನಿತ್ಯವೂ ಬಗೆ ಬಗೆಯ ಭಕ್ಷ್ಯಗಳನ್ನು ಸಿದ್ಧಪಡಿಸುವ ಅಡುಗೆಯವರು ಸಾಮಾನ್ಯವಾಗಿ ಭಕ್ಷ್ಯಗಳನ್ನು ತಿನ್ನುವುದೇ ಇಲ್ಲ. ಅಷ್ಟೇ ಅಲ್ಲ, ಅವುಗಳನ್ನು ಕಂಡು ಜಿಗುಪ್ಸೆಪಟ್ಟುಕೊಳ್ಳುತ್ತಾರೆ ಸಹ. ಕೊನೆಗೆ ಇವರು ಸೇವಿಸುವುದು ನಮ್ಮ ಮೂಲ ಆಹಾರವಾದ ಅನ್ನ - ಸಾರು - ಮಜ್ಜಿಗೆಗಳನ್ನು ಮಾತ್ರ. ಇದರಂತೆಯೇ ಇಂದು ನಮ್ಮ ಕಣ್ಣಿಗೆ ಕಾಣುತ್ತಿರುವ ಈ ''ಜೀನ್ಸ್ ಪ್ರಪಂಚ''ದ ಸುಖವು, ಈ ಅಧಿಕಾರದ ವಿಲಾಸಗಳೆಲ್ಲವೂ ಭಕ್ಷ್ಯಗಳಂತೆ ನಾಲ್ಕು ದಿನ ಸವಿಯಾಗಿ ಕಂಡರೂ, ಜಿಗುಪ್ಸೆಗೊಳಗಾಗಿ, ಕೊನೆಗೆ ಇವರು ನಮ್ಮ ಮೂಲ ಸುಖವಿರುವುದು ಆಧ್ಯಾತ್ಮದಲ್ಲೇ ಎಂದು ಕಂಡುಕೊಳ್ಳುತ್ತಾರೆ. ಆಗ ತಾವು ಏನನ್ನೋ ಜೀವನದಲ್ಲಿ ಕಳೆದುಕೊಂಡಿದ್ದೇವೆಂದು, ಅದನ್ನು ಪಡೆಯಲಿಲ್ಲವೆಂದು ಈ ಲೌಕಿಕ ಜನರ ಮನದಲ್ಲಿ ದುಃಖವಾಗತೊಡಗುತ್ತದೆ. ಆದ್ದರಿಂದಲೇ ಆಧ್ಯಾತ್ಮಿಕತೆಯಿಂದ ಕೂಡಿರುವ ಮಠದಲ್ಲಿನ ವಾತಾವರಣವು ಇವರಿಗೆ ಸಂತೋಷವನ್ನುಂಟುಮಾಡುತ್ತದೆ. ಹೀಗಾಗಿ ಇಲ್ಲಿ ಸೇವೆ ಮಾಡುತ್ತಾ ಸಾರ್ಥಕತೆಯ ಅನುಭವವನ್ನು ಇವರು ಹೊಂದುತ್ತಾರೆ. ಆದ್ದರಿಂದ ಆಧ್ಯಾತ್ಮಿಕತೆಯೆಡೆಗೆ ಹೆಚ್ಚು ಗಮನಕೊಡಲಾಗಲಿಲ್ಲವೆಂದು ಪರಿತಪಿಸುವ ಈ ಜನರ ಪಶ್ಚಾತ್ತಾಪದ ನೋವಿನ ದನಿಯನ್ನು ಕೇಳುವ ಆ ಪರಮಾತ್ಮನು ಆಧ್ಯಾತ್ಮಿಕತೆಯಲ್ಲೇ ಮುಂದುವರೆದಿರುವವರಿಗೆ ಕೊಡುವಂತೆ ಆಧ್ಯಾತ್ಮದೆಡೆಗೆ ಭಕ್ತಿಪೂರಿತ ಆಸಕ್ತಿ ಪ್ರದರ್ಶಿಸುವ ಇವರಿಗೂ ಸ್ವಲ್ಪ ಪುಣ್ಯವನ್ನು ಕೊಟ್ಟರೆ ಆಶ್ಚರ್ಯವೇನಿಲ್ಲ.

---

**ವಿಳಾಸ ಬದಲಾವಣೆ ಮಾಡುವವರು ಹೊಸ ವಿಳಾಸ, ಎಲ್.ನಂ. ಜೊತೆಗೆ ಹಳೆಯ ವಿಳಾಸವನ್ನೂ ತಿಳಿಸಬೇಕು. ಇಲ್ಲದಿದ್ದಲ್ಲಿ ವಿಳಾಸ ಬದಲಾವಣೆ ಮಾಡಲಾಗುವುದಿಲ್ಲ.**
**ಮೃತರ ಹೆಸರಿನಲ್ಲಿ ಪತ್ರಿಕೆ ಪಡೆಯುತ್ತಿರುವವರ ಬಗ್ಗೆ ಮಾಹಿತಿ ಇದ್ದರೆ ತಿಳಿಸಿ.**

# ಖಾಸಗಿ ರಾಯರ ಮಠಗಳಿಗೆ
# ಮಂತ್ರಾಲಯ ಮಠದಿಂದ ಸಹಾಯ



## ಖಾಸಗಿ ರಾಯರ ಮಠಗಳು ಮಂತ್ರಾಲಯ ಮಠದ ವಶಕ್ಕೆ

ಕಲಿಯುಗದ ಕಾಮಧೇನು, ಕಲ್ಪವೃಕ್ಷರೆಂದು ಖ್ಯಾತರಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ೩೩೫ ವರ್ಷಗಳ ಹಿಂದೆ ಸಶರೀರರಾಗಿ ಮಂತ್ರಾಲಯ ಕ್ಷೇತ್ರದಲ್ಲಿ ಬೃಂದಾವನ ಪ್ರವೇಶ ಮಾಡಿದಾಗಿನಿಂದ ಮಂತ್ರಾಲಯದಿಂದ ಮೂಲ ಬೃಂದಾವನದ ಮೃತ್ತಿಕೆಯನ್ನು ಪಡೆದು, ಅನೇಕ ಮೃತ್ತಿಕಾ ಬೃಂದಾವನಗಳು ರಾಷ್ಟ್ರದಾದ್ಯಂತ ನಿರ್ಮಾಣವಾಗಿವೆ. ಅನೇಕ ಮಠಗಳು ಅಭಿವೃದ್ಧಿಯ ಪಥದತ್ತ ಸಾಗಿದ್ದರೆ, ಮತ್ತೆ ಕೆಲವು ಮೃತ್ತಿಕಾ ಬೃಂದಾವನದ ಮಠಗಳನ್ನು ಕಟ್ಟಿದವರು ನಿರ್ವಹಣೆಯನ್ನು ಮಾಡಲಾಗದೆ ಕೈಚೆಲ್ಲಿ ಕುಳಿತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಮಠಗಳವರು ನಮ್ಮನ್ನು ಸಂಪರ್ಕಿಸಿದಲ್ಲಿ ಸಕಲ ವ್ಯವಸ್ಥೆಯನ್ನೂ ಮಾಡಿ, ಮಂತ್ರಾಲಯದ ಆಡಳಿತ ವ್ಯಾಪ್ತಿಗೆ ಅವುಗಳನ್ನು ಪಡೆದು ಅಭಿವೃದ್ಧಿಪಡಿಸಲಾಗುವುದು.

**ರಾಯರ ಹೆಸರಿನಲ್ಲಿ ಪ್ರಾರಂಭವಾದ ಮಠವು ರಾಯರಿಗೇ ಸೇರಬೇಕಲ್ಲವೆ?**

ಸಂಪರ್ಕಿಸಬೇಕಾದ ವಿಳಾಸ

**ಕಾರ್ಯನಿರ್ವಾಹಕ ವ್ಯವಸ್ಥಾಪಕರು**

ನಂ. 4, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಸೀತಾಪತಿ ಅಗ್ರಹಾರ, ಹೊಸತರಗುಪೇಟೆ, ಬೆಂಗಳೂರು - 560 002
**ದೂರವಾಣಿ : 080–26708642**
**ಮೊಬೈಲ್ : 9342651516, 9343798112, 9986991411**





# ಗೀತಾವಿವೃತಿ
## (ಕನ್ನಡಾನುವಾದ)

■ ಅನುವಾದ : ಪಂಡಿತರತ್ನ, ವಿದ್ಯಾವಾಚಸ್ಪತಿ **ಡಾ. ಆರ್.ಜಿ. ಮಾಳಗಿ**
ನಂ. ೨೬೬/೪, ೩ನೇ ಮುಖ್ಯರಸ್ತೆ, ೬ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು - ೧೯

ಹಿಂದಿನ ಸಂಚಿಕೆಯಿಂದ.......

### ಗೀತಾವಿವೃತಿ

**ಧನುರ್ಹಸ್ತಾತ್ ಪತತಿ । ತ್ವಕ್ ಚ ಪರಿತಃ ತಪ್ಯತ ಏವ । ಅವಸ್ಥಾತುಂ ಚ ನ ಶಕ್ನೋಮಿ ಮನಶ್ಚ ಮೇ ಭ್ರಮತೀವ ಚ ॥ ೩೦ ॥**

**ವಿಪರೀತಾನಿ ನಿಮಿತ್ತಾನಿ = ದುರ್ನಿಮಿತ್ತಾನಿ ಚ ಪಶ್ಯಾಮಿ । ಕೇಶವ! = ಬ್ರಹ್ಮರುದ್ರ ಪ್ರವರ್ತಕ । ಕಶ್ಚ ಈಶಶ್ಚ ಕೇಶೌ, ತೌ ಸೃಷ್ಟ್ಯಾದಿನಾ ವರ್ತಯತೀತಿ ವ್ಯುತ್ಪತ್ತೇಃ । ಕೇಶಪದ ಉಪಪದಾತ್ ವೃತುವರ್ತನೇ ಇತ್ಯತೋ ಅಂತರ್ಣೀತಣ್ಯಾರ್ಥಾತ್ ಡು ಪ್ರತ್ಯಯೇ ರೂಪಸಿದ್ಧೇಃ । ಉಕ್ತಂ ಹಿ ಸ್ಥಿತಪ್ರಜ್ಞಸ್ಯ ಕಾ ಭಾಷಾ ಇತ್ಯೇತದ್ಭಾಷ್ಯೇ ॥**

**ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಃ ಶಂಕರ ಏವ ಚ ।**
**ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್ ॥ ಇತಿ ॥**

**ಯುದ್ಧೇನ ಶ್ರೇಯೋ ಲಭ್ಯತೇ ಇತ್ಯತ ಆಹ – ನಚೇತಿ । ಶ್ರೇಯಶ್ಚ ನ ಪಶ್ಯಾಮಿ ಆಹವೇ ಯುದ್ಧೇ ॥ ೩೧ ॥**

**ವಿಜಯಾದಿಕಂ ಫಲಂ ನೇಚ್ಛಾಮಿ ॥ ೩೨ ॥**

**ಅನುವಾದ** –'ಗಾಂಡೀವ' ಎಂಬ ಧನುಸ್ಸು ನನ್ನ ಕೈಯಿಂದ ಜಾರಿ ಬೀಳುತ್ತಿದೆ. ಚರ್ಮವು ಎಲ್ಲ ಕಡೆಯಿಂದಲೂ ಸುಡುತ್ತಲೇ ಇದೆ. ನಾನು ನಿಲ್ಲಲೂ ಶಕ್ತನಾಗುತ್ತಿಲ್ಲ. ನನ್ನ ಬುದ್ಧಿಯು (ಮನಸ್ಸು) ಭ್ರಮೆಗೊಳಗಾದಂತೆ ಭಾಸವಾಗುತ್ತಿದೆ. ॥ ೩೦ ॥

ವಿಪರೀತಾನಿ ನಿಮಿತ್ತಾನಿ = ಅಪಶಕುನಗಳನ್ನು ನೋಡುತ್ತಿದ್ದೇನೆ. ಕೇಶವನೇ = ಬ್ರಹ್ಮ ರುದ್ರ ಪ್ರವರ್ತಕನೇ! ಕ ಎಂದರೆ ಬ್ರಹ್ಮ, ಈಶ ಎಂದರೆ ರುದ್ರ. ಇವರಿಬ್ಬರನ್ನೂ ಸೃಷ್ಟಿ - ಸ್ಥಿತಿ - ನಿಯಮನ ಮುಂತಾದವುಗಳಿಂದ ನಿಯಂತ್ರಿಸುವವನಾದುದರಿಂದ ಕೇಶವ ಎಂದರೆ ಬ್ರಹ್ಮ-ರುದ್ರಪ್ರವರ್ತಕ ಎಂದು ರಾಯರು ಕೇಶವ ಶಬ್ದನಿಷ್ಪತ್ತಿ(ವ್ಯುತ್ಪತ್ತಿ) ಯನ್ನು ತೋರಿಸಿದ್ದಾರೆ. ಕೇಶ ಎಂಬ ಉಪಪದವಿರುವ 'ವೃತು ವರ್ತನೇ' ಎಂಬ

ಧಾತುವಿನ ಒಳಗೆ ಅಡಗಿರುವ ಣಿಜಂತಾರ್ಥದಲ್ಲಿ ‘ಡು’ ಪ್ರತ್ಯಯವು ಬಂದು ‘ಕೇಶವ’ ಎಂಬ ರೂಪವು ನಿಷ್ಪನ್ನವಾಗುತ್ತದೆ (ಸಿದ್ಧವಾಗುತ್ತದೆ). ಹೀಗಾಗಿ ಕೇಶವನೆಂದರೆ ಬ್ರಹ್ಮ-ರುದ್ರರನ್ನು ನಿಯಮಿಸುವವನು ಎಂದು ಅರ್ಥ.

ಆನಂದತೀರ್ಥ ಭಗವತ್ಪಾದರು ‘ಸ್ಥಿತಪ್ರಜ್ಞಸ್ಯ ಕಾ ಭಾಷಾ’ ಎಂಬ ಗೀತೆಯ ಎರಡನೆಯ ಅಧ್ಯಾಯದ ಶ್ಲೋಕವನ್ನು ವಿವರಿಸುವಾಗ ಗೀತಾಭಾಷ್ಯದಲ್ಲಿ ‘ಕೇಶವ’ ಎಂಬ ಶಬ್ದಕ್ಕೆ ‘‘ಬ್ರಹ್ಮ-ರುದ್ರಪ್ರವರ್ತಕ’’ ಎಂಬ ಅರ್ಥವನ್ನು ಪ್ರಮಾಣಪುರಸ್ಸರವಾಗಿ ವಿವರಿಸಿದ್ದಾರೆ. ಆ ಪ್ರಮಾಣದ ಅರ್ಥವು ಹೀಗಿದೆ -

ಕಃ ಎಂದರೆ ಹಿರಣ್ಯಗರ್ಭನು (ಬ್ರಹ್ಮನು), ಈಶ ಎಂದರೆ ಶಂಕರನು. ಇವರಿಬ್ಬರನ್ನೂ ಸೃಷ್ಟ್ಯಾದಿಗಳಿಂದ ನೀನು ನಿಯಂತ್ರಿಸುವವನು. ಆದ್ದರಿಂದ ನೀನು ‘ಕೇಶವ’ ಶಬ್ದದಿಂದ ಕರೆಯಿಸಿಕೊಳ್ಳಲ್ಪಡುತ್ತೀಯಿ ಎಂಬುದಾಗಿ.

‘‘ಯುದ್ಧದಿಂದ ಶ್ರೇಯಸ್ಸು (ಕೀರ್ತಿಯು) ಲಭಿಸುವುದಷ್ಟೆ! ಆದ್ದರಿಂದ ಯುದ್ಧವನ್ನು ಮಾಡು’’. ಎಂದರೆ ‘ನ ಚ’ ಎಂಬ ಶ್ಲೋಕದಿಂದ ಅರ್ಜುನನು ಹೇಳುತ್ತಾನೆ - ‘‘ಯುದ್ಧದಲ್ಲಿ ಶ್ರೇಯಸ್ಸನ್ನು ನಾನು ಕಾಣುವುದಿಲ್ಲ’’. (ಯುದ್ಧ ಮಾಡಿ ನಾವು ಶ್ರೇಯಸ್ಸನ್ನು ಪಡೆಯಲಾರೆವು). ॥ ೩೧ ॥

ವಿಜಯಾದಿ ಫಲಗಳನ್ನು ನಾನು ಅಪೇಕ್ಷಿಸುವುದಿಲ್ಲ. ॥ ೩೨ ॥

## ಭಗವದ್ಗೀತೆ

**ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ ।**
**ತ ಇಮೇ ಅವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥ ೩೩ ॥**

**ಆಚಾರ್ಯಾಃ ಪಿತರಃ ಪುತ್ರಾಃ ತಥೈವ ಚ ಪಿತಾಮಹಾಃ ।**
**ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ ॥ ೩೪ ॥**

**ಏತಾನ್ ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।**
**ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥ ೩೫ ॥**

**ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।**
**ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥ ೩೬ ॥**

**ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸಬಾಂಧವಾನ್ ।**
**ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥ ೩೭ ॥**



**ಅನುವಾದ -** ಯಾರಿಗೋಸ್ಕರವಾಗಿ ನಮಗೆ ರಾಜ್ಯ, ಭೋಗ ಮತ್ತು ಸುಖ ಇವುಗಳೆಲ್ಲವೂ ಅಪೇಕ್ಷಿತವಾಗಿದೆಯೋ, ಆ ಬಂಧುಗಳೇ ಪ್ರಾಣದಾಸೆಯನ್ನೂ, ಸಂಪತ್ತಿನ ಆಸೆಯನ್ನೂ ತೊರೆದು ಯುದ್ಧಸನ್ನದ್ಧರಾಗಿ ನಿಂತಿದ್ದಾರೆ. ॥ ೩೩ ॥

ಗುರುಗಳು, ಪಿತೃಸಮಾನರು, ಮಕ್ಕಳು, ತಾತಂದಿರು, ಸೋದರಮಾವಂದಿರು, ಹೆಣ್ಣು ಕೊಟ್ಟ ಮಾವಂದಿರು, ಮೊಮ್ಮಕ್ಕಳು, ಭಾವಮೈದುನರು ಮತ್ತು ಇನ್ನುಳಿದ ಸಂಬಂಧಿಗಳೆಲ್ಲರೂ ಯುದ್ಧರಂಗದಲ್ಲಿ ನಿಂತಿದ್ದಾರೆ. ॥ ೩೪ ॥

ಮಧುನಾಮಕ ದೈತ್ಯನನ್ನು ಕೊಂದಿರುವ ಕೃಷ್ಣನೇ! ನಾನು ಯುದ್ಧವಿಮುಖನಾಗಿ ನಿಂತಾಗ ಇವರಿಂದ ನಾನು ಕೊಲ್ಲಲ್ಪಟ್ಟರೂ ಸರಿಯೇ, ಇವರನ್ನು ಮಾತ್ರ ಕೊಲ್ಲಲು ಇಚ್ಛಿಸಲಾರೆ. ಮೂರು ಲೋಕದ ಆಧಿಪತ್ಯವು ಲಭಿಸುವಂತಿದ್ದರೂ ನಾನು ಇವರನ್ನು ಕೊಲ್ಲಲಾರೆ. ಎಂದಮೇಲೆ ಕೇವಲ ಭೂಮಿಯ ಒಡೆತನಕ್ಕಾಗಿ ಇವರನ್ನು ಕೊಲ್ಲಲಾರೆ ಎಂದು ಪ್ರತ್ಯೇಕವಾಗಿ ಹೇಳಬೇಕೇನು ? ॥ ೩೫ ॥

ಜನಾರ್ದನನೇ! ಕೌರವರನ್ನು ಕೊಂದದ್ದರಿಂದ ನಮಗೆ ಆಗುವ (ಸುಖವಾದರೂ) ಕೀರ್ತಿಯಾದರೂ ಏನು ? ಆತತಾಯಿಗಳಾದ = ಹೆಣ್ಣು, ಹೊನ್ನು, ಮಣ್ಣು ಇವುಗಳನ್ನು ಅಪಹರಿಸುವ ಈ ಕೌರವರನ್ನು ಕೊಂದದ್ದರಿಂದ ನಮಗೆ ಪಾಪವೇ ಬಂದೀತು. ಹಿಂಸೆಯು ಸಾಧನವಾದುದರಿಂದ ಇವರನ್ನು ಹಿಂಸಿಸುವುದರಿಂದ ಪಾಪವೇ ನಮ್ಮನ್ನು ಆಶ್ರಯಿಸೀತು ॥ ೩೬ ॥

ಮಾಧವನೇ! (ಆದ್ದರಿಂದ) ಹಿಂದೆ ಹೇಳಿದ ಎಲ್ಲ ಕಾರಣಗಳಿಂದ ಬಂಧುಸಹಿತರಾದ ಕೌರವರನ್ನು ಕೊಲ್ಲಲು ನಾವು ಅರ್ಹರಲ್ಲ. ಬಂಧುಗಳನ್ನು ಕೊಂದು ನಾವು ಹೇಗೆ ಸುಖಿಗಳಾದೇವು ? ॥ ೩೭ ॥

## ಗೀತಾವಿವೃತಿ

**ಯೇಷಾಮರ್ಥೇ, ಪ್ರಯೋಜನನಿಮಿತ್ತಂ, ರಾಜ್ಯಾದ್ಯಪೇಕ್ಷಿತಂ, ನಃ = ಅಸ್ಮಾಕಂ, ತ ಇಮೇ ಬಾಂಧವಾಃ, ಪ್ರಾಣಾನ್ ಧನಾನಿ ಚ ತ್ಯಕ್ತ್ವಾ ಯುದ್ಧೇ ವ್ಯವಸ್ಥಿತಾಃ ॥ ೩೩ ॥**

**ತೇ ಕೇ ಇತ್ಯತ ಆಹ - ಆಚಾರ್ಯಾ ಇತಿ ॥ ೩೪ ॥**

**ನೈವೇಚ್ಛಾಮಿ ಇತಿ ಏವಕಾರಾನ್ವಯಃ । ಯದಿ ಮಾಂ ಯುದ್ಧಾನ್ನಿವೃತ್ತಮ್ ಏತೇ ಹನ್ಯುಃ ತರ್ಹಿ ಘ್ನತೋಽಪಿ ನೈವ ಹಂತುಮಿಚ್ಛಾಮೀತ್ಯರ್ಥಃ । ಹೇ ಮಧುನಾಯಕ**

ದೈತ್ಯಮರ್ದನ! ಕೈಮುತ್ಯನ್ಯಾಯೇನಾಹ, ಅಪೀತಿ । ತ್ರೈಲೋಕ್ಯರಾಜ್ಯಸ್ಯಾಪಿ ಹೇತೋಃ ಏತಾನ್ ಹಂತುಂ ನೇಚ್ಛಾಮಿ ಕಿಮುತ ಮಹೀಮಾತ್ರನಿಮಿತ್ತಮಿತಿ ॥ ೩೫ ॥

ಕಿಂಚ ಧಾರ್ತರಾಷ್ಟ್ರಾನ್ನಿಹತ್ಯ ನೋಽಸ್ಮಾಕಂ ಕಾ ಪ್ರೀತಿಃ ಕಿಮ್ ಐಹಿಕಸುಖಂ ನ ಕಿಮಪಿ । ನಾಪಿ ಪಾರತ್ರಿಕಂ, ಪ್ರತ್ಯುತ ಪಾರತ್ರಿಕದುಃಖಹೇತು ಪಾಪಮೇವ ಅಸ್ಮಾನಾಶ್ರಯೇತ್ । ನ ಜಾಯತೆ ಇತಿ ಜನಃ, ಅರ್ದಯತಿ ಸಂಸಾರಮಿತಿ ಅರ್ದನಃ ಜನಶ್ಚಾಸಾವರ್ದನಶ್ಚೇತಿ ಜನಾರ್ದನಃ ತಸ್ಯ ಸಂಬುದ್ಧಿಃ । ಉಕ್ತಂ ಹ್ಯೇವಂ ಗೀತಾಭಾಷ್ಯೇ ದಶಮೇ । ಆತತಾಯಿನಃ –

ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ ।
ಕ್ಷೇತ್ರದಾರಾಪಹಾರೀಚ ಷಡೇತೇ ಹ್ಯಾತತಾಯಿನಃ ॥ ॥ ಭೀ.ಪ. ೧೦೭-೧೧೦ ॥

ಇತ್ಯುಕ್ತ ಲಕ್ಷಣಾತ್ ॥ ೩೬ ॥

ತಸ್ಮಾತ್ 'ಸೀದಂತಿ ಮಮ ಗಾತ್ರಾಣಿ' ಇತ್ಯಾದಿನೋಕ್ತೋಪಪತ್ತಿಬಲಾತ್ ಸಬಾಂಧವಾನ್ ಧಾರ್ತರಾಷ್ಟ್ರಾನ್ ಹಂತುಂ ವಯಂ ನಾರ್ಹಾಃ ।

ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ ।
ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ ॥ ॥ ಶಾಂತಿಪರ್ವ ೧೫-೧೫ ॥

ಇತ್ಯುಕ್ತೇಸ್ತೇಷಾಮ್ ಆತತಾಯಿತ್ವೇನ ಹಂತವ್ಯತಯಾ ಪ್ರಾಪ್ತತ್ವೇಪಿ ತದ್ಧನನ ಪ್ರಸಕ್ತ್ಯಾ ಬಂಧೂನಾಮಪಿ ಹನನಪ್ರಾಪ್ತೇಃ ನ ಹಂತುಂ ವಯಂ ಯೋಗ್ಯಾಃ ಇತಿ ಭಾವಃ । ಬಂಧುತ್ವೇಪಿ ಆತತಾಯಿಸಂಬಂಧಿತ್ವಾತ್ ತೇಽಪಿ ಬಂಧುಜನಾ ಹಂತವ್ಯಾಃ ಏವೇತ್ಯತ ಆಹ – ಸ್ವಜನಂ ಹೀತಿ । ಸ್ಯಾಮ = ಭವೇಮ । ತದ್ದರ್ಶನ ಸ್ಪರ್ಶನ ಸಂಭಾಷನಾದೇಃ ಅಭಾವಪ್ರಾಪ್ತೇಃ ಇತಿ ಭಾವಃ ॥ ೩೭ ॥

**ಅನುವಾದ** – ಯೇಷಾಮರ್ಥೇ = ಯಾರ ಪ್ರಯೋಜನಕ್ಕಾಗಿ (ಯಾರಿಗೋಸ್ಕರ-ವಾಗಿ) ರಾಜ್ಯ ಮೊದಲಾದವುಗಳು ನಮಗೆ ಅಪೇಕ್ಷಿತವಾಗಿದ್ದಾವೆಯೋ ಆ ಬಾಂಧವರು ಪ್ರಾಣಗಳ ಹಂಗನ್ನೂ, ಸಂಪತ್ತಿನ ಆಸೆಯನ್ನೂ ತೊರೆದು ರಣರಂಗ-ದಲ್ಲಿ ಯುದ್ಧಸನ್ನದ್ಧರಾಗಿ ನಿಂತಿದ್ದಾರೆ. ॥ ೩೩ ॥

**ಯುದ್ಧಸನ್ನದ್ಧರಾಗಿ ನಿಂತಿರುವವರು ಯಾರು ಯಾರು ಎಂಬುದನ್ನು ಆಚಾರ್ಯಾ ಎಂಬ ಶ್ಲೋಕದಿಂದ ಹೇಳಿದ್ದಾರೆ.** ॥ ೩೪ ॥

**ನೈವ ಇಚ್ಛಾಮಿ ಎಂಬುದಾಗಿ ಏವಕಾರವನ್ನು ನಞ ಜೊತೆಯಲ್ಲಿ ಅನ್ವಯಿಸಬೇಕು. ಯುದ್ಧದಿಂದ ನಿವೃತ್ತನಾದ ನನ್ನನ್ನು ಈ ಎದುರಾಳಿಗಳು ಒಂದು ವೇಳೆ ಹಿಂಸಿಸಿದರೂ, ಅವರಿಂದ ಕೊಲ್ಲಲ್ಪಟ್ಟವನಾದರೂ ನಾನು ಅವರನ್ನು ಸಂಹರಿಸಲು (ಕೊಲ್ಲಲು)**



**ಬಯಸುವುದಿಲ್ಲ ಎಂದು ಅಭಿಪ್ರಾಯ. ಎಲೈ ಮಧುನಾಮಕ ದೈತ್ಯನನ್ನು ಕೊಂದವನೇ!** ಯುದ್ಧ ಮಾಡಿದ್ದರಿಂದ ಮೂರು ಲೋಕಗಳ ಅಧಿಪತ್ಯವು ಸಿಗುತ್ತದೆ. (ಮೂರು ಲೋಕಗಳ ಪ್ರಾಪ್ತಿಯ ಕಾರಣದಿಂದಲೂ ಇವರನ್ನು ಕೊಲ್ಲಲು ನಾನು ಇಚ್ಛಿಸುವುದಿಲ್ಲ. ಹೀಗಿರುವಾಗ ಕೇವಲ ಭೂಲೋಕದ ಪ್ರಾಪ್ತಿಗಾಗಿ ಇವರನ್ನು ಕೊಲ್ಲುವುದಿಲ್ಲ ಎಂದು ಪ್ರತ್ಯೇಕ ಹೇಳಬೇಕೇ? ಹೇಳಬೇಕಾಗಿಲ್ಲ ಎಂದು ಕೈಮುತ್ಯ ನ್ಯಾಯದಿಂದ ಆ 'ಅಪಿ' ಶಬ್ದದಿಂದ ಹೇಳಿದ್ದಾರೆ. ॥ ೩೫ ॥

**'ನೈವ ಇಚ್ಛಾಮಿ ಇತ್ಯೇವಕಾರಾನ್ವಯಃ'** ಎಂದು ರಾಯರು ಏವಕಾರಾನ್ವಯವನ್ನು ಹೇಳಿದ್ದಾರೆ. ಆದರೆ ಪ್ರಚಲಿತ ಪಾಠದ ಪ್ರಕಾರ ಈ ಶ್ಲೋಕದಲ್ಲಿ ಏವಕಾರ ಇಲ್ಲ. ಹಿಂದಿನ ಶ್ಲೋಕದಲ್ಲೇ ಆಗಲೀ, ಮುಂದಿನ ಶ್ಲೋಕದಲ್ಲಿಯೂ ಇಲ್ಲ, 'ಪಾಪಮೇವಾಶ್ರಯೇತ್' ಎಂಬ ಮುಂದಿನ ಶ್ಲೋಕದಲ್ಲಿ ಏವಕಾರ ಇದೆ. ಆದರೆ ಅಲ್ಲಿರುವ ಏವಕಾರವನ್ನು ರಾಯರು 'ಪಾಪ ಶಬ್ದದ ಜೊತೆಯಲ್ಲಿ ಅನ್ವಯಿಸಿದ್ದಾರೆ. ಹೀಗಾಗಿ ಈ ಶ್ಲೋಕ-ದಲ್ಲಿರುವ 'ನಞ' ಜೊತೆಯಲ್ಲಿ ಅನ್ವಯಿಸುವ ಏವಕಾರ ಪಾಠವು ಪ್ರಚಲಿತ ಪಾಠದಲ್ಲಿ ಇಲ್ಲ. ಆದರೂ ರಾಯರು ಏವಕಾರಾನ್ವಯ ಹೇಳಿರುವುದರಿಂದ 'ಏವಕಾರ' ಸಹಿತ-ವಾದ ಪಾಠವು ಶ್ರೀರಾಯರಿಗೆ ದೊರೆತಿರಬೇಕು. ॥ ೩೫ ॥

ಮತ್ತು ಧೃತರಾಷ್ಟ್ರನ ಮಕ್ಕಳಾದ ಕೌರವರನ್ನು ಕೊಂದು ನಮಗೆ ದೊರೆಯ-ಬಹುದಾದ ಸುಖವಾದರೂ ಎಂಥಹುದು? ಐಹಿಕ ಸುಖವಿದೆಯೇ? ಅದು ಇಲ್ಲ. ಪಾರತ್ರಿಕ ಸುಖವಿದೆಯೋ? ಅದೂ ಇಲ್ಲ. ಪ್ರತ್ಯುತ = ಅದರ ಬದಲಾಗಿ ಪರಲೋಕದಲ್ಲಿ ಪಡಬಹುದಾದ ದುಃಖಕ್ಕೆ ಕಾರಣವಾದ ಪಾಪವೇ ನಮಗೆ ಬರುತ್ತದೆ. ಜನಾರ್ದನ ಎಂಬ ಶಬ್ದದ ಅರ್ಥವನ್ನು ಶ್ರೀಮದಾನಂದತೀರ್ಥರು ಗೀತಾಭಾಷ್ಯದ ಹತ್ತನೆಯ ಅಧ್ಯಾಯದಲ್ಲಿ ಹೀಗೆ ವಿವರಿಸಿದ್ದಾರೆ. ಭಗವಂತನು ಹುಟ್ಟುವುದಿಲ್ಲ. ಆದ್ದರಿಂದ ಅವನು 'ಜನ'. ಸಂಸಾರವನ್ನು ನಾಶಪಡಿಸುತ್ತಾನಾದ್ದರಿಂದ ಅವನು 'ಅರ್ದನ'. ಭಗವಂತನು (ಕೃಷ್ಣನು) ಹುಟ್ಟುವುದಿಲ್ಲ ಮತ್ತು ಸಂಸಾರನಾಶಕನಾಗಿ-ದ್ದಾನೆ. ಆದ್ದರಿಂದ ಅವನು 'ಜನಾರ್ದನ' ಶಬ್ದದಿಂದ ಕರೆಯಲ್ಪಡುತ್ತಾನೆ. ಅಂಥಹಾ 'ಜನಾರ್ದನನೇ!' ಎಂದು ಅರ್ಜುನನು ಸಂಬೋಧಿಸಿದ್ದಾನೆ.

'ಆತತಾಯಿನಃ' ಮಹಾಭಾರತದ ಭೀಷ್ಮಪರ್ವದಲ್ಲಿ 'ಆತತಾಯಿ'ಯ ಲಕ್ಷಣ-ವನ್ನು ಹೀಗೆ ಹೇಳಿದ್ದಾರೆ – 'ಬೆಂಕಿ ಕೊಡುವವನು (ಬೆಂಕಿ ಹಚ್ಚುವವನು)' ವಿಷ

ಕೊಡುವವನು, ಶಸ್ತ್ರಗ್ರಹಣ ಮಾಡಿ ಎದುರು ಬರುವವನು, ಪರರ ಹಣವನ್ನು ಅಪಹರಿಸುವವನು, ಭೂಮಿ ಮತ್ತು ಸ್ತ್ರೀ ಅಪಹಾರಕನು. ಈ ಆರು ಜನರು ''ಆತತಾಯಿ''ಗಳೆನಿಸಿದ್ದಾರೆ. ॥ ೩೬ ॥

ತಸ್ಮಾತ್ = 'ಸೀದಂತಿ ಮಮ ಗಾತ್ರಾಣಿ' ನನ್ನ ಅಂಗಾಂಗಗಳು ಶಿಥಿಲವಾಗುತ್ತಿವೆ ಎಂಬಲ್ಲಿಂದ ಈ ವರೆಗೆ ಹೇಳಿದ ಅನೇಕ ಕಾರಣಗಳಿಂದಾಗಿ, ಬಂಧು-ಬಾಂಧವರಿಂದ ಕೂಡಿದ ದುರ್ಯೋಧನಾದಿಗಳನ್ನು ಕೊಲ್ಲಲು ನಾವು ಅರ್ಹರಲ್ಲ.

ಮಹಾಭಾರತ ಶಾಂತಿಪರ್ವದಲ್ಲಿ ''ಯುದ್ಧರಂಗದಲ್ಲಿ ಎದುರಾಳಿಯಾಗಿ ಯುದ್ಧಕ್ಕೆ ಬಂದಿರುವ ಆತತಾಯಿಯನ್ನು ಏನೂ ವಿಚಾರಮಾಡದೇ ಕೂಡಲೇ ಕೊಲ್ಲಲೇಬೇಕು. ಹಾಗೆ ಮಾಡಿದಲ್ಲಿ ಆತತಾಯಿಯನ್ನು ಕೊಂದವನಿಗೆ ಯಾವ ದೋಷವೂ ಬರುವುದಿಲ್ಲ'' ಎಂದು ಹೇಳಿರುವುದರಿಂದ, ದುರ್ಯೋಧನಾದಿಗಳು ಆತತಾಯಿಗಳಾಗಿರುವುದರಿಂದ ಅವರು ವಧಾರ್ಹರಾಗಿದ್ದಾರೆ (ಅವರ ವಧವು ಪ್ರಾಪ್ತವಾಗಿದೆ). ಆದರೂ ಅವರನ್ನು ಕೊಲ್ಲುವ ಸಂದರ್ಭದಲ್ಲಿ ಇತರ ಬಂಧುಗಳನ್ನೂ ಕೊಲ್ಲುವ ಸಂದರ್ಭ ಬರುತ್ತದೆ. ದುರ್ಯೋಧನಾದಿಗಳು ಆತತಾಯಿಗಳಾದುದರಿಂದ ಅವರು ವಧಾರ್ಹರಾದರೂ ಕೂಡ ಅವರ ಸಂಬಂಧಿಗಳಾದ ಭೀಷ್ಮ-ದ್ರೋಣಾದಿಗಳು ಆತತಾಯಿಗಳಲ್ಲ. ಆದ್ದರಿಂದ ಅವರು ವಧಾರ್ಹರಲ್ಲ. ಆತತಾಯಿಗಳಾದ ದುರ್ಯೋಧನಾದಿಗಳನ್ನು ಕೊಲ್ಲಲು ಹೊರಟಾಗ ಆತತಾಯಿಗಳಲ್ಲದ, ಆತತಾಯಿಗಳ ಬಂಧುಗಳಾದ ಭೀಷ್ಮ-ದ್ರೋಣಾದಿಗಳನ್ನೂ ಕೊಲ್ಲಬೇಕಾದ ಸಂದರ್ಭ ಬರುವುದರಿಂದ ''ಅವರನ್ನು ಕೊಲ್ಲಲು ನಾವು ಅರ್ಹರಲ್ಲ'' ಎಂದು ಅರ್ಜುನನ ಅಭಿಪ್ರಾಯ.

**ವಿವರಣೆ –** ''ಸ್ವಬಾಂಧವಾನ್'' ಎಂಬುದು ಪ್ರಚಲಿತ ಪಾಠ 'ಸಬಾಂಧವಾನ್' ಎಂಬುದು ರಾಯರಿಗೆ ಸಮ್ಮತವಾದ ಪಾಠ. ರಾಯರು ಬರೆದ ವ್ಯಾಖ್ಯಾನದಂತೆ ''ಸಬಾಂಧವಾನ್'' ಎಂಬ ಪಾಠವೇ ಸರಿಯಾದ ಪಾಠ ಎನಿಸುತ್ತದೆ. ಸ್ವಬಾಂಧವರು ಆತತಾಯಿಗಳಾಗಿರುವುದರಿಂದ ಅವರ ವಧೆಯು ಶಾಸ್ತ್ರಸಮ್ಮತವಾದುದರಿಂದ ''ಅವರನ್ನು ಕೊಲ್ಲಲು ನಾವು ಅರ್ಹರಲ್ಲ'' ಎಂಬ ಅರ್ಜುನನ ಮಾತು ವ್ಯರ್ಥವಾಗುತ್ತದೆ. 'ಸಬಾಂಧವಾನ್' ಎಂಬ ಪಾಠದಲ್ಲಿ ದುರ್ಯೋಧನಾದಿಗಳು ಆತತಾಯಿಗಳಾದ್ದರಿಂದ ಅವರು ವಧಾರ್ಹರಾಗಿದ್ದರೂ ಅವರ ಸಂಬಂಧಿಗಳಾದ (ಬಂಧುಗಳಾದ) ಭೀಷ್ಮ-ದ್ರೋಣರು ಆತತಾಯಿಗಳಲ್ಲ. ಆದುದರಿಂದ ಸಬಾಂಧವರಾದ ದುರ್ಯೋಧನಾದಿ-



ಗಳನ್ನು ಕೊಲ್ಲಲು ನಾವು ಅರ್ಹರಲ್ಲ ಎಂಬ ಅರ್ಜುನನ ಮಾತು ಸಮಂಜಸವಾಗುತ್ತದೆ.

ಭೀಷ್ಮ - ದ್ರೋಣಾದಿಗಳು ಆತತಾಯಿಗಳಲ್ಲದಿದ್ದರೂ, ಬಂಧುಗಳಾಗಿದ್ದರೂ, ಆತತಾಯಿಗಳಾದ ದುರ್ಯೋಧನಾದಿಗಳ ಸಂಬಂಧವು ಅವರಿಗಿರುವುದರಿಂದ ಬಂಧುಜನರಾದ ಅವರೂ ವಧಾರ್ಹರಾಗಿದ್ದಾರಷ್ಟೆ! ಆದ್ದರಿಂದ ಅವರನ್ನೂ (ಭೀಷ್ಮ- ದ್ರೋಣಾದಿಗಳನ್ನೂ) ಏಕೆ ಕೊಲ್ಲಬಾರದು ? ಎಂಬ ಪ್ರಶ್ನೆಗೆ ಅರ್ಜುನನು 'ಸ್ವಜನಂ ಹಿ' ಎಂಬ ಶ್ಲೋಕಭಾಗದಿಂದ ಉತ್ತರಿಸುತ್ತಾನೆ. ಸ್ಯಾಮ = ಆಗುತ್ತೇವೆ. ಬಂಧುಗಳನ್ನು ಕೊಂದದ್ದರಿಂದ ನಾವು ಹೇಗೆ ಸುಖಿಗಳಾದೇವು ? ಅವರ (ಭೀಷ್ಮಾದಿಗಳ) ದರ್ಶನ - ಸ್ಪರ್ಶನ - ಸಂಭಾಷಣ ಮುಂತಾದವುಗಳಿಂದ ವಂಚಿತರಾಗುವುದರಿಂದ (ರಹಿತರಾಗುವುದರಿಂದ) ನಮಗೆ ಹೇಗೆ ತಾನೇ ಸುಖವುಂಟಾದೀತು ? ಎಂದು ಅರ್ಜುನನ ಅನಿಸಿಕೆ. ॥ ೩೭ ॥

(ಮುಂದುವರೆಯುವುದು)

## ಜಿಜ್ಞಾಸುಗಳಿಗೊಂದು ಸಂತಸದ ಸುದ್ದಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸಿದ್ಧಾಂತದ ಅಮೃತರಸವನ್ನು ಸುರಿಸುತ್ತಿರುವುದೇ ಹರಿಕಥಾಮೃತಸಾರ. ಇಂತಹ ಹರಿಕಥಾಮೃತಸಾರಕ್ಕೆ ಶ್ರೀಸಂಕರ್ಷಣತೀರ್ಥರು ರಚಿಸಿರುವ ವ್ಯಾಖ್ಯಾನವು ವಿಶೇಷವಾಗಿದೆ. ಈಗಾಗಲೇ ಸಂಕರ್ಷಣ ಒಡೆಯರ ವ್ಯಾಖ್ಯಾನದೊಂದಿಗೆ ಅನೇಕ ಪ್ರಕಾಶನದಿಂದ ಹರಿಕಥಾಮೃತಾಸಾರ ಪ್ರಕಟಗೊಂಡಿದೆ. ಆದರೆ, ಬೆಂಗಳೂರಿನ ಶ್ರೀಜಗನ್ನಾಥವಿಠಲ ಪ್ರಕಾಶನದವರು ಹೊರತಂದಿರುವ ಎರಡು ಪುಸ್ತಕಗಳು ಸಂಗ್ರಹಯೋಗ್ಯವಾಗಿದೆ. ೧೯೧೨ ರಲ್ಲಿಯೇ ಈ ವ್ಯಾಖ್ಯಾನ ತೆಲುಗಿನ ಲಿಪಿಯೊಂದಿಗೆ ಪ್ರಕಟಗೊಂಡ ಗ್ರಂಥವನ್ನು ೧೮೮೧ ರಲ್ಲಿ ಸೌಗಂಧಿಕಾ ಪಟ್ಟಣದ ಶ್ರೀವರದೇಂದ್ರವಿಠಲದಾಸರಿಂದ ಶುದ್ಧಮಾಡಲ್ಪಟ್ಟು ಬೆಳಗಾಂ ನಲ್ಲಿ ಮುದ್ರಿಸಲ್ಪಟ್ಟ ದೇವನಾಗರಿ ಲಿಪಿಯ ಮೂಲಪ್ರತಿಯನ್ನನುಸರಿಸಿ ಎರಡು ಸಂಪುಟಗಳಲ್ಲಿ ಹೊರತರಲಾಗಿದೆ. ಮೊದಲ ಸಂಪುಟವು ಒಂದರಿಂದ ಒಂಭತ್ತು ಸಂಧಿಗಳನ್ನೊಳಗೊಂಡಿದೆ. ಎರಡನೇ ಸಂಪುಟವು ೧೦ ರಿಂದ ೨೧ ಸಂಧಿಗಳನ್ನೊಳಗೊಂಡಿದೆ. ಈ ಸಂಪುಟಗಳ ಮತ್ತೊಂದು ವಿಶೇಷವೆಂದರೆ ಶ್ರೀಗೋಪಾಲದಾಸರಿಂದ ರಚಿತವಾದ ಅನೇಕ ದೇವರುಗಳನ್ನು, ಕಂಕಣಕಾರ ಸುಳಾದಿಯ ಚಕ್ರಾಬ್ಧಿಮಂಡಲದ ವಿಶೇಷತೆಯನ್ನು ಇನ್ನು ಮುಂತಾದ ಚಿತ್ರಗಳನ್ನು ಅಳವಡಿಸಿಕೊಂಡಿರುವುದು ಅವರ ಕಾರ್ಯಕ್ಷಮತೆಯನ್ನು ತೋರುತ್ತದೆ. ಈ ಹರಿಕಥಾಮೃತಸಾರದ ಪ್ರತಿಯೊಂದು ಪದ್ಯಕ್ಕೂ ಸಂಧಿಸೂಚನೆ, ಅನ್ವಯ, ಟೀಕಾ, ತಾತ್ಪರ್ಯ ವಿಶೇಷಾರ್ಥಗಳನ್ನು ನೀಡಲಾಗಿದೆ. ಇದೊಂದು ಸಂಗ್ರಹಯೋಗ್ಯವಾದ ಉತ್ತಮ ಕೃತಿಯಾಗಿದೆ.

**– ಸಂ.**

ಲೇಖನಾಂಕ

# ಮಾಧ್ವವಾಙ್ಮಯದಲ್ಲಿ ಮೋಕ್ಷಸ್ವರೂಪ

■ ವಿದ್ವಾನ್. ಕಡಪ. ರಾಘವೇಂದ್ರಾಚಾರ್ಯ
ಪ್ರಾಂಶುಪಾಲರು, ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

**"ಭೂತಬಂಧಸ್ತು ಸಂಸಾರೋ ಮುಕ್ತಿಸ್ತೇಭ್ಯೋ ವಿಮೋಚನಮ್"** ಪ್ರಕೃತಿಬಂಧನವೇ ಸಂಸಾರ. ಪ್ರಕೃತಿಬಂಧನದಿಂದ ವಿಮುಕ್ತಿಯೇ ಮೋಕ್ಷ. ಮೋಕ್ಷವೆಂದರೆ ಬಿಡುಗಡೆ ಎಂದರ್ಥ. ಪುನಃ ಪುನಃ ಉಂಟಾಗುವ ಜನನ-ಮರಣಗಳೇ ಸಂಸಾರ. ಈ ಸಂಸಾರದಿಂದ ಬಿಡುಗಡೆ ಹೊಂದುವುದೇ ಮೋಕ್ಷ.

**ಅನಿಷ್ಟನಿವೃತ್ತಿಪೂರ್ವಕ ಇಷ್ಟಪ್ರಾಪ್ತಿಯೇ ಮೋಕ್ಷ.** ಹೀಗೆ ಮೋಕ್ಷವು ದಳದ್ವಯಗಳಿಂದ ಕೂಡಿದೆ. ಮಿಥ್ಯಾಜ್ಞಾನನಿಂದನೆಯಿಂದ ದುಃಖ, ಅಜ್ಞಾನಾದ್ಯನಿಷ್ಟ ನಿವೃತ್ತಿ, ವಿಷ್ಣುವಿನ ಯಥಾರ್ಥಜ್ಞಾನದಿಂದ ಇಷ್ಟಪ್ರಾಪ್ತಿ ಅಂದರೆ **ಸ್ವಸ್ವರೂಪಾನಂದಾವಿರ್ಭಾವವಾಗುವುದೇ ಮೋಕ್ಷ.** ಅದಕ್ಕೆ ಶ್ರೀವ್ಯಾಸರಾಜರು **"ಮುಕ್ತಿರ್ನೈಜಸುಖಾನುಭೂತಿಃ"** ಎಂದು ಹೇಳಿದರು. ಅವರವರ ಸ್ವರೂಪಕ್ಕೆ ತಕ್ಕಂತೆ **ಅವರವರ ಸಂಪೂರ್ಣಾನಂದವನ್ನು ಅನುಭವಿಸುವುದೇ ಮೋಕ್ಷ.**

ಮೋಕ್ಷದಲ್ಲಿ ಜೀವರ ಯೋಗ್ಯತೆಗನುಗುಣವಾಗಿ ಅಂದರೆ ಅವರವರ ಸ್ವರೂಪಕ್ಕೆ ತಕ್ಕಂತೆ ಆನಂದದಲ್ಲಿ ತಾರತಮ್ಯವಿರುತ್ತದೆ. ಪ್ರಾರಬ್ಧಕರ್ಮದ ಅಡ್ಡಿ ಇಲ್ಲದಿದ್ದರೆ ದೇಹಪಾತವಾದ ನಂತರ ಕ್ಷಣದಲ್ಲಿಯೇ ಮುಕ್ತಿಯು ದೊರೆಯುತ್ತದೆ. ಪ್ರಾರಬ್ಧ ಕರ್ಮದ ಅಡ್ಡಿ ಇದ್ದಲ್ಲಿ ಅದರ ಸಂಪೂರ್ಣ ಭೋಗಾನಂತರವೇ ಮುಕ್ತಿಯು ದೊರಕುತ್ತದೆ. ಅಪರೋಕ್ಷಜ್ಞಾನವುಂಟಾಗಲು ಅಡ್ಡಿಯಾದ ಪ್ರಾರಬ್ಧಕರ್ಮವಿದ್ದರೆ ಅಪರೋಕ್ಷಜ್ಞಾನವಾಗುವುದಿಲ್ಲ. ಅಡ್ಡಿಯಾದ ಪ್ರಾರಬ್ಧಕರ್ಮವಿಲ್ಲದಿದ್ದರೆ ಅಪರೋಕ್ಷಜ್ಞಾನವಾಗುತ್ತದೆ.

ಅವರವರ ಸ್ವರೂಪಕ್ಕೆ ತಕ್ಕಂತೆ ಮುಕ್ತಿಯೋಗ್ಯ ಜೀವರಿಂದ ಮಾಡಿಸಲ್ಪಟ್ಟ ಸಾಧನೆಗಳ ಫಲವಾದ ಮುಕ್ತಿಯ ನಾಲ್ಕು ಹಂತಗಳನ್ನು ತಿಳಿಸಲು, ಬ್ರಹ್ಮಮೀಮಾಂಸಾ ಶಾಸ್ತ್ರದ ನಾಲ್ಕನೇ (ಫಲ) ಅಧ್ಯಾಯವು ಹೊರಟಿದೆ. ಆ ನಾಲ್ಕು ಹಂತಗಳು ಹೀಗಿವೆ -

೧. ಕರ್ಮಕ್ಷಯ = ಎಲ್ಲ ಅನಿಷ್ಟಕರ್ಮಗಳಿಂದ ಬಿಡುಗಡೆ.

೨. ಉತ್ಕ್ರಾಂತಿ = ಶರೀರದ ಸುಷುಮ್ನಾ ನಾಡಿಯ ಮೂಲಕ ಉತ್ಕ್ರಮಣ.



೩. ಮಾರ್ಗ = ಇತರ ದೇವತೆಗಳಿಂದ ಅಧಿಷ್ಠಿತಗಳಾದ ಲೋಕಗಳನ್ನು ದಾಟಿ ಭಗವಂತನೆಡೆಗೆ ಸಾಗುವ ಮಾರ್ಗ.

೪. ಭೋಗ = ಚಿದಾನಂದಾತ್ಮಕ ದೇಹದಿಂದ ಸ್ವರೂಪಾನಂದವನ್ನು ಅನುಭವಿಸುವುದು.

ಪ್ರಾರಬ್ಧಕರ್ಮವನ್ನು ಬಿಟ್ಟು, ಜ್ಞಾನವಾಗುವುದಕ್ಕೆ ಮುಂಚೆ ಮತ್ತು ಅನಂತರ ಮಾಡಿದ ಎಲ್ಲ ಕರ್ಮಗಳೂ ಜ್ಞಾನವಾದ ಕೂಡಲೇ ನಾಶವಾಗುತ್ತವೆ. ಉತ್ತಮಾಧಿಕಾರಿಗಳಿಗೆ ಜ್ಞಾನವಾದ ನಂತರದಲ್ಲಿ ಮಾಡಿದ ಕರ್ಮಗಳ ಲೇಪವಾಗುವುದಿಲ್ಲ. ಅಧಮಾಧಿಕಾರಿಗಳಾದ ಮನುಷ್ಯೋತ್ತಮರಿಗೆ ಜ್ಞಾನವಾದ ನಂತರ ಮಾಡಿದ ಪಾಪಕರ್ಮಗಳು ಮುಕ್ತಿಯಲ್ಲಿ ಆನಂದಹ್ರಾಸಕ್ಕೆ ಕಾರಣವಾಗುತ್ತವೆ.

ಜ್ಞಾನ ಮತ್ತು ಭೋಗದಿಂದ ಕರ್ಮಕ್ಷಯವನ್ನು ಹೊಂದಿದ ಅಧಿಕಾರಿಗಳು ದೇಹತ್ಯಾಗ ಮಾಡುವ ರೀತಿಗೆ ಅಧಿಕಾರಭೇದದಿಂದ 'ಲಯ' ಮತ್ತು 'ಉತ್ಕ್ರಮಣ' ಎಂದು ಹೇಳುತ್ತಾರೆ. ತಾರತಮ್ಯದಲ್ಲಿ ಕನಿಷ್ಠರಾದ ದೇವತೆಗಳು ತಮಗಿಂತ ಉತ್ತಮರಾದ ಹಾಗೂ ತಮಗೆ ಜನಕರಾದ ದೇವತೆಗಳಲ್ಲಿ ಲಯವನ್ನು ಹೊಂದಿ ತಾರತಮ್ಯಾನುಸಾರ ಭೋಗಗಳನ್ನು ಅನುಭವಿಸುತ್ತಾರೆ. ತಾರತಮ್ಯದಲ್ಲಿ ಅಧಮರಾದ ದೇವತೆಗಳು ಚತುರ್ಮುಖ ಬ್ರಹ್ಮದೇವರ ಪರ್ಯಂತ ತಮಗಿಂತ ಉತ್ತಮರಾದ ದೇವತೆಗಳಲ್ಲಿ ಅನುಕ್ರಮವಾಗಿ ಲಯವನ್ನು ಹೊಂದಿ ಭೋಗಗಳನ್ನು ಭೋಗಿಸುತ್ತಾರೆ. ಚತುರ್ಮುಖ ಬ್ರಹ್ಮದೇವರು ಪರಮಾತ್ಮನಲ್ಲಿ ಲಯವನ್ನು ಹೊಂದುತ್ತಾರೆ. ಲಯವನ್ನು ಹೊಂದಿದ ಎಲ್ಲ ದೇವತೆಗಳ ಭೋಗವಾದರೂ ತಾರತಮ್ಯಾನುಸಾರ ಇರುತ್ತದೆ. ಮುಕ್ತರೆಲ್ಲರೂ ಪರಮಾತ್ಮನ ಅಧೀನರೇ ಆಗಿದ್ದಾರೆ.

ಲಕ್ಷ್ಮೀದೇವಿಗೆ ಲಯವಿಲ್ಲ. ನಿತ್ಯಮುಕ್ತಳಾದ, ದೇಶತಃ ಕಾಲತಃ ಸಮಾನಳಾದ, ಗುಣತಃ ಸಮಳಲ್ಲದ, **ಅಸ್ವತಂತ್ರಳಾದ ರಮಾದೇವಿಗೆ ಲಯವೆಂದರೆ ಶ್ರೀಹರಿಯ ಅತ್ಯಂತ ಸಾಮೀಪ್ಯವಾಗಿರುವುದೇ ಆಗಿದೆ.**

ಜ್ಞಾನಿಗಳಾದ ಮನುಷ್ಯರು ಬ್ರಹ್ಮನಾಡಿಯ ದ್ವಾರಾ ದೇಹದಿಂದ ಹೊರಟು ಮುಕ್ತಿಯನ್ನು ಹೊಂದುತ್ತಾರೆ. ಮುಕ್ತಿಯನ್ನು ಹೊಂದುವಾಗ ಮಾತ್ರ ಈ ರೀತಿ ಉತ್ಕ್ರಮಣವಾಗುತ್ತದೆ.

ಚತುರ್ಮುಖ ಬ್ರಹ್ಮದೇವರ ಲಯವಾಗುವಾಗ, ದೇವತೆಗಳು ತಮ್ಮನ್ನು ಸೃಷ್ಟಿಮಾಡಿದ ತಮಗಿಂತ ಉತ್ತಮರಾದ ದೇವತೆಗಳಲ್ಲಿ ಲಯವನ್ನು ಹೊಂದುತ್ತಾರೆ. ಇದೇ ದೇವತೆಗಳಿಗೆ ಮಾರ್ಗವು. ಅರ್ಚಿರಾದಿ ಮಾರ್ಗ ಮತ್ತು ದೇಹದಿಂದ ಉತ್ಕ್ರಮಣವೂ ಅವರಿಗೆ ಇರುವುದಿಲ್ಲ.

ಮುಕ್ತರಾದ ಮನುಷ್ಯೋತ್ತಮಾದಿಗಳು ಮತ್ತು ದೇವತೆಗಳು ಚಿದಾನಂದಾತ್ಮಕ ದೇಹವುಳ್ಳವರಾಗಿ ಪರಬ್ರಹ್ಮನನ್ನು ಅತಿಕ್ರಮಿಸದೇ (ಮೀರದೇ) ಭೋಗಗಳನ್ನು ಅನುಭವಿಸುವರು. ಶ್ರೀಹರಿಗೆ ಸರ್ವಭೋಕ್ತೃತ್ವವನ್ನು ಸಮರ್ಥಿಸಲು, ಸಾಯುಜ್ಯ ಮುಕ್ತಿಯನ್ನು ಪಡೆದವರು ಭಗವಂತನಿಂದ ಭುಕ್ತವಾದದ್ದನ್ನೇ ಭೋಗಿಸುವರೆಂದು ಸಮರ್ಥಿಸಿರುವರು. ಮುಕ್ತರು ಜ್ಞಾನಾನಂದಾತ್ಮಕ ದೇಹವುಳ್ಳವರಾಗಿ, ಯಥೇಷ್ಟ ಭೋಗಗಳನ್ನು ಭಗವಂತನ ದೇಹದ್ವಾರಾ ಅನುಭವಿಸುವರು.

ವಿಷ್ಣುವಿಗೆ ಮಾತ್ರ ಸರ್ವೋತ್ತಮತ್ವವನ್ನು ಸಮರ್ಥಿಸಲು, ಮುಕ್ತರಿಗೆ ಜಗತ್ಸೃಷ್ಟ್ಯಾದಿ ಜಗದ್ವ್ಯಾಪಾರರಾಹಿತ್ಯವನ್ನು ಮತ್ತು ಸ್ವಯೋಗ್ಯತೆಗಿಂತ ಅಧಿಕವಾದ ಆನಂದರಾಹಿತ್ಯವನ್ನು ಸಮರ್ಥಿಸಲಾಗಿದೆ. ಮುಕ್ತರು ತಮಗಿಂತ ಉತ್ತಮರ ಅಧೀನರಾಗಿರುತ್ತಾರೆ.

ಮೋಕ್ಷದಲ್ಲಿ ಮಾಡತಕ್ಕ ಉಪಾಸನೆ ಫಲರೂಪವಾಗಿದೆ. ಸಾಧನರೂಪವಲ್ಲ. ಅಲ್ಲಿಯ ಭೋಗವು ಕ್ರೀಡಾರೂಪವಾಗಿದೆ. ಆದಕಾರಣ, ಮುಕ್ತರಿಗೆ ಆನಂದಾದಿಗಳಲ್ಲಿ ವೃದ್ಧಿಹ್ರಾಸಗಳಿಲ್ಲ. ಮುಕ್ತರಿಗೆ ಯಾವ ವಿಧವಾದ ದುಃಖಾದಿಗಳಿರುವುದಿಲ್ಲ.

''ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'' ಅಂದರೆ ಪುಣ್ಯವು ನಾಶವಾಗಲು, ಸ್ವರ್ಗವನ್ನು ಪಡೆದವರು ಪುನಃ ಸಂಸಾರವನ್ನು ಪಡೆಯುವಂತೆ ಮುಕ್ತರಿಗೆ ಪುನರಾವೃತ್ತಿವುಂಟೆ ? ಎಂಬ ಪ್ರಶ್ನೆ ಬಂದರೆ ಮುಕ್ತರಿಗೆ ಪುನರಾವೃತ್ತಿ ಇಲ್ಲ ಎಂದು ಸಮರ್ಥಿಸಲಾಗಿದೆ.

ಅಂತಹ ಮೋಕ್ಷವು ಭಗವಂತನ ಅನುಗ್ರಹದಿಂದಲೇ.

**ಯಸ್ಯ ಪ್ರಸಾದಾತ್ ಪರಮಾರ್ತಿರೂಪಾತ್**
**ಅಸ್ಮಾತ್ಸಂಸಾರಾನ್ಮುಚ್ಯತೇ ನಾಪರೇಣ ।**
**ನಾರಾಯಣೋಽಸೌ ಪರಮೋ ವಿಚಿಂತ್ಯಃ**
**ಮುಮುಕ್ಷುಭಿಃ ಕರ್ಮಪಾಶಾದಮುಷ್ಮಾತ್ ॥** - (ನಾರಾಯಣಶ್ರುತಿ)

ಯಾವ ಭಗವಂತನ ಅನುಗ್ರಹವಿಲ್ಲದೇ ಸಂಸಾರಬಂಧನವು ಬಿಡಗಡೆಯಾವುದಿಲ್ಲವೋ ಅಂತಹ ಸರ್ವೋತ್ತಮನಾದ ನಾರಾಯಣನನ್ನು ಮೋಕ್ಷಾಪೇಕ್ಷಿಗಳು ಸದಾ ಧ್ಯಾನಿಸುತ್ತಲೇ ಇರಬೇಕು. ಅದಕ್ಕೆ ಶ್ರೀಮದಾಚಾರ್ಯರು - ''ಸಂತತಂ ಚಿಂತಯೇನಂ ತಮಂತಕಾಲೇ ವಿಶೇಷತಃ'' ಎಂದು ಹೇಳಿದರು.

ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮಗಳು ಅನಿತ್ಯಗಳು. ಮೋಕ್ಷವೊಂದೇ ನಿತ್ಯ. ಆದ್ದರಿಂದ ಬುದ್ಧಿವಂತನು ಮೋಕ್ಷಕ್ಕಾಗಿ ಪ್ರಯತ್ನಿಸಬೇಕು.



ಇಂತಹ ಮೋಕ್ಷವು ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ ಮತ್ತು ಸಾಯುಜ್ಯ ಎಂಬುದಾಗಿ ನಾಲ್ಕು ವಿಧ.

೧. ಶ್ರೀಹರಿಯ ದಿವ್ಯದರ್ಶನವು ಸದಾ ಮುಕ್ತರನ್ನು ಎಲ್ಲಿ ಆನಂದಗೊಳಿಸುವುದೋ ಅದೇ ಸಾಲೋಕ್ಯ ಮೋಕ್ಷ.

೨. ಶ್ರೀಹರಿಯ ಸಾದೃಶ್ಯರೂಪದಿಂದ (ಚತುರ್ಭುಜ - ಪೀತಾಂಬರಾದಿಗಳು) ಯಥೇಚ್ಛ ವಿಹಾರ ಮಾಡಿ ಆನಂದಿಸುವುದೇ ಸಾರೂಪ್ಯಮೋಕ್ಷ.

೩. ಶ್ರೀಹರಿಯ ಸಮೀಪದಲ್ಲಿದ್ದು ಅನೇಕ ವಿಧವಾದ ಆನಂದವನ್ನು ಅನುಭವಿಸುವುದೇ ಸಾಮೀಪ್ಯಮೋಕ್ಷ.

೪. ಶ್ರೀಹರಿಯನ್ನು ಪ್ರವೇಶಿಸಿ, ಶ್ರೀಹರಿಯಿಂದ ಭುಕ್ತಾವಶಿಷ್ಟ ಸ್ವಯೋಗ್ಯ ಭೋಗಗಳನ್ನು ಸ್ವೇಚ್ಛೆಯಿಂದ ಶ್ರೀಹರಿ ದೇಹದಿಂದ ಹೊರಗೆ ಬಂದು ಅನೇಕ ವಿಧವಾದ ಆನಂದಗಳನ್ನು ಅನುಭವಿಸುವುದೇ ಸಾಯುಜ್ಯಮೋಕ್ಷವು.

**॥ ಸರ್ವೇ ಜನಾಃ ಸುಖಿನೋ ಭವಂತು ॥**

❑❑


## ಈಗ 'ಹಿಂದಿ' ಭಾಷೆಯಲ್ಲಿ ಲಭ್ಯವಿದೆ

ಮಧ್ವಮುನಿಪ್ರಿಯ ಮಹಾಮಹೋಪಾಧ್ಯಾಯ

**ಡಾ. ಬಿ.ಎನ್.ಕೆ. ಶರ್ಮಾ,** ಎಂ.ಎ., ಪಿಹೆಚ್.ಡಿ., ಡಿ.ಲಿಟ್.

**"Madhwa's Teachings in His Own Words"**

**'श्रीमध्वाचार्य के उपदेश, उन्हीं के शब्दो में'**

ಪುಟ : *xxviii + 201* ಬೆಲೆ : ರೂ. *60* + ಅಂಚೆವೆಚ್ಚ

ಅನುವಾದಕರು :
**ಶ್ರೀ ಕೆ.ಎ. ಹಾರ್ನಹಳ್ಳಿ,** ಮುಂಬೈ
ದೂರವಾಣಿ : *(022) 28491778,* ಮೊಬೈಲ್ : *9223240267*

ಪ್ರಕಾಶಕರು :
**ಶ್ರೀಪೂರ್ಣಪ್ರಜ್ಞ ಸಂಶೋಧನಾ ಮಂದಿರ**
ಶ್ರೀಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಬೆಂಗಳೂರು - *560 028.*
ದೂರವಾಣಿ : *(080) 26694026.*

॥ಶ್ರೀಹರಿ ಸರ್ವೋತ್ತಮ॥ ॥ಹರೇ ಶ್ರೀನಿವಾಸ॥ ॥ವಾಯುಜೀವೋತ್ತಮ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

॥ ಸರ್ವೇ ಜನಾಃ ಸುಖಿನೋ ಭವಂತು ॥

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗುತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

**ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ**

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಯರು ಮತ್ತು ಪುರೋಹಿತರು**

ನಂ. 122, 2ನೇ ಮಹಡಿ, 2ನೇ ಬ್ಲಾಕ್, ಗಣೇಶ ಮಂದಿರ ರಸ್ತೆ
ತ್ಯಾಗರಾಜನಗರ, ಬೆಂಗಳೂರು - 560 028

**ದೂರವಾಣಿ : 080-55351688, ಮೊಬೈಲ್ : 98444 75429**






ಭಾರತಪುಷ್ಪ – ೧

# ಮಹಾಭಾರತದಲ್ಲಿ ಭೀಷ್ಮರ ಸ್ಥಾನ

■ ವಿದ್ವಾನ್ ಶ್ರೀ ವಿ. ರಮೇಶಾಚಾರ್ಯ
'ಗೌತಮ ಕೃಪ', ಆಚಾರ್ಯ ಸ್ಟ್ರೀಟ್, ತುಮಕೂರು – ೫೭೨ ೧೦೧

ಹಿಂದಿನ ಸಂಚಿಕೆಯಿಂದ.......

## ಭೀಷ್ಮರು ಜೂಜಿನಲ್ಲಿ ಪಾಲ್ಗೊಂಡರೆ?

ದುರ್ಯೋಧನಾದಿಗಳು ಪಾಂಡವರನ್ನು ಕರೆದು ಮೋಸದಿಂದ ಜೂಜಾಟದಲ್ಲಿ ತೊಡಗಿಸಿ ಸಕಲೈಶ್ವರ್ಯವನ್ನು ಮೋಸದಿಂದ ಹರಣ ಮಾಡುತ್ತಿದ್ದ ಸಂದರ್ಭದಲ್ಲಿ ಕುರುಕುಲಪಿತಾಮಹನಾಗಿ ದುರ್ಯೋಧನಾದಿಗಳಿಗೆ ತಿಳಿಹೇಳಿ ಜೂಜಾಟವನ್ನು ತಪ್ಪಿಸದೆ, ಸ್ವತಃ ತಾವೇ ಜೂಜಾಟದ ಸಮಯದಲ್ಲಿ ಪ್ರೇಕ್ಷಕರಾಗಿದ್ದರು. ಆದುದರಿಂದಲೂ ಭೀಷ್ಮರು ಜೂಜಿನಲ್ಲಿ ಪಾಲ್ಗೊಂಡಂತೆ ಆಗಲಿಲ್ಲವೆ? ಎಂದು ಕೆಲ ಪಂಡಿತರು ವಿಮರ್ಶಿಸಿದ್ದಾರೆ. ಇದು ಸರಿಯೆ? ಎಂದರೆ –

ಮಹಾಭಾರತದಲ್ಲಿ ತಿಳಿಸಿರುವಂತೆ, ದುರ್ಯೋಧನನು ಪಾಂಡವರ ಅಪಾರ ಐಶ್ವರ್ಯವನ್ನು ನೋಡಿ ಸಹಿಸದೆ, ಏನಾದರೂ ಉಪಾಯದಿಂದ ಪಾಂಡವರ ಐಶ್ವರ್ಯ ಹರಣಮಾಡಬೇಕೆಂಬ ಇಚ್ಛೆಯಿಂದ ಶಕುನಿಯೊಡನೆ ಸೇರಿ ಮಾಡಿದ ದುರಾಲೋಚನೆಯ ಫಲವೇ ಜೂಜಾಟ. ಶಕುನಿ ಹಾಗೂ ದುರ್ಯೋಧನರು ಧೃತರಾಷ್ಟ್ರನು ಪಾಂಡವರನ್ನು ಆಹ್ವಾನಿಸದೆ ಜೂಜಾಟಕ್ಕೆ ಬರಲಾರರೆಂದೆಣಿಸಿ, ಧೃತರಾಷ್ಟ್ರನನ್ನು ಬಲವಂತವಾಗಿ ಒಪ್ಪಿಸಿದ್ದಾರೆ. ಈ ಜೂಜಾಟದ ಚರ್ಚೆ ವಿದುರನ ಕಿವಿಗೂ ಬಿದ್ದು, ವಿದುರರೂ ಜೂಜಾಟದ ಮುಂದಿನ ಪರಿಣಾಮ ಕುಲನಾಶ ಎಂಬುದಾಗಿ ಎಚ್ಚರಿಸಿದ್ದಾರೆ. ಭೀಷ್ಮರನ್ನು ಯಾವುದೇ ಹಂತದಲ್ಲೂ ಧೃತರಾಷ್ಟ್ರನಾಗಲೀ, ದುರ್ಯೋಧನನಾಗಲೀ ಜೂಜಾಟ ಆಡುವ ಬಗ್ಗೆ ಸಲಹೆ ಕೇಳಿಲ್ಲ. ಅವರಿಗೆ ಗೊತ್ತಾಗದಂತೆ ಸಭೆ ನಿರ್ಮಾಣ ಮಾಡಿದ್ದಾರೆ. ಸಭೆಗೆ ಬಂದು ಕೂತಾಗ ಜೂಜಾಟ ಪ್ರಾರಂಭವಾಯಿತು. ಆಗ ಸಭೆಯಲ್ಲಿ ಭೀಷ್ಮಾದಿಗಳು ಒಲ್ಲದ ಮನಸ್ಸಿನಿಂದಲೇ ಬಹಳ ಖೇದದಿಂದಲೇ ಸಭೆಯಲ್ಲಿ ಕುಳಿತಿದ್ದಾರೆ. (ಭೀಷ್ಮೋ ದ್ರೋಣಃ ಕೃಪಶ್ಚೈವ ವಿದುರಶ್ಚ ಮಹಾಮತಿಃ । ನಾತಿ ಪ್ರೀತೇನ ಮನಸಾ ತೇ ಅನ್ವವರ್ತಂತ ಭಾರತ)

ವಿದುರೋ ದ್ರೋಣಪುತ್ರಶ್ಚ ವೈಶ್ಯಪುತ್ರಶ್ಚ ವೀರ್ಯವಾನ್ ।
ಭೂರಿಶ್ರವಾ ಶಾಂತನವೋ ವಿಕರ್ಣಶ್ಚ ಮಹಾರಥಃ ॥

**ಮಾ ದ್ಯೂತಮಿತ್ಯಭಾಷಂತ ಶಮೋಽಸ್ತ್ವಿತಿ ಚ ಸರ್ವಶಃ ।**
**ವಾರ್ಯಮಾಣೋ ಹಿ ಭೀಷ್ಮೇಣ ದ್ರೋಣೇನ ವಿದುರೇಣ ಚ ॥**

**ಛಾಂದವಾನಾಂ ಪ್ರಿಯಾಂ ಭಾರ್ಯಾಂ ದ್ರೌಪದೀಂ ಧರ್ಮಚಾರಿಣೀಮ್ ।**
**ಪ್ರಾಹಿಣೋ ದಾನಯೇಹೇತಿ ಪುತ್ರೋ ದುರ್ಯೋಧನಸ್ತವ ॥**

ಎಂಬುದಾಗಿ ಭಾರತದಲ್ಲೇ ಭೀಷ್ಮ-ದ್ರೋಣಾದಿಗಳು ದುರ್ಯೋಧನನ ಅಕಾರ್ಯವನ್ನು ನಿವಾರಿಸಲು ಪ್ರಯತ್ನಪಟ್ಟರೆಂದು ಹೇಳಿದೆ.

ದ್ಯೂತವನ್ನು ಕುರಿತು ಯಾರಾದರೂ ಕರೆದರೆ ನಾನು ಬರುವುದಿಲ್ಲ ಎಂದು ಹೇಳಲಾರೆ ಎಂದು ಧರ್ಮರಾಜ ಪ್ರತಿಜ್ಞೆ ಮಾಡಿದ್ದಾನೆ. ಈ ಪ್ರತಿಜ್ಞೆಯನ್ನು ಅರಿತೇ ಶಕುನಿ, ದುರ್ಯೋಧನಾದಿಗಳು ದ್ಯೂತಕ್ಕೆ ಆಹ್ವಾನಿಸಲು ಕುತಂತ್ರ ಮಾಡಿದ್ದು. ವಿದುರರು ದ್ಯೂತ ಬೇಡ ಕಲಹಕ್ಕೆ ಕಾರಣ, ವೈರಕ್ಕೆ ಕಾರಣ. ಮಹಾರಥಿಕರಾದ ಪಾಂಡವರ ದ್ವೇಷ - ಕುಲನಾಶಕ್ಕೆ ಕಾರಣ ಎಂದು ದ್ಯೂತ ನಡೆಯುವಾಗಲೂ ಸಭೆಯ ಮಧ್ಯೆ ಎದ್ದು ಎಚ್ಚರಿಸಿದ್ದಾರೆ. ಇಷ್ಟಾದರೂ ಕೇಳದೇ ದ್ಯೂತದ ನಿಶೆ ಏರಿ ಆಟ ಆಡುವಾಗ ಭೀಷ್ಮರು ಉಪದೇಶ ಮಾಡಿದರೆ ತಾನೇ ಏನು ಫಲ? ಇಂಥಹಾ ಸಂದರ್ಭದಲ್ಲಿ ಪಟ್ಟುಹಿಡಿದು ಭೀಷ್ಮಾದಿಗಳು ಕಲಿಯ ಆವೇಶದಿಂದಲೇ ನಿವಾರಿಸಲಿಲ್ಲವೆಂದು ಆಚಾರ್ಯರು ಹೇಳಿರುವುದು ತಪ್ಪಾಗಲಾರದು. (ವಿದುರರ ಮಾತು - ದ್ಯೂತಂ ಮೂಲಂ ಕಲಹಸ್ಯಾಭ್ಯುಪೈತಿ ಮಿಥೋ ಭೇದಂ ಮಹತೇ ದಾರುಣಾಯ । **ಯಥಾಸ್ಥಿತೋಽಯಂ ಧೃತರಾಷ್ಟ್ರಸ್ಯ ಪುತ್ರೋ ದುರ್ಯೋಧನಃ ಸೃಜತೇ ವೈರಮುಗ್ರಮ್** ॥)

ಧರ್ಮರಾಜ ಎಲ್ಲವನ್ನೂ ದ್ಯೂತದಲ್ಲಿ ಸೋತು ದ್ರೌಪದಿಯನ್ನು ಪಣಕ್ಕೆ ಇಟ್ಟಾಗ ಸಭೆಯಲ್ಲಿದ್ದ ಸಭ್ಯರೆಲ್ಲರೂ ಧಿಕ್ಕಾರ ಮಾಡಿದ್ದಾರೆ. ಮೈಯ ತುಂಬ ಬೆವರು ಬರುತ್ತಿದೆ. ತಲೆ ಕೆಳಗೆ ಮಾಡಿ ಕಣ್ಣಲ್ಲಿ ನೀರು ಸುರಿಸುತ್ತಿದ್ದಾರೆ. (ಧಿಗ್ ಧಿಗ್ ಇತ್ಯೇವ ವೃದ್ಧಾನಾಂ ಸಭ್ಯಾನಾಂ ನಿಃಸೃತಾ ಗಿರಃ । **ಭೀಷ್ಮದ್ರೋಣಕೃಪಾದೀನಾಂ ಸ್ವೇದಶ್ಚ ಸಮಜಾಯತ । ಆಸ್ತೇ ಧ್ಯಾಯನ್ ಅಧೋ ವಕ್ತ್ರೋ ನಿಃಶ್ವಸನ್ನಿವ ಪನ್ನಗಃ । ಇತರೇಷಾಂ ತು ಸಭ್ಯಾನಾಂ ನೇತ್ರೇಭ್ಯಃ ಪ್ರಾಪ ತಜ್ಜಲಮ್** ॥) ಈ ರೀತಿಯಾಗಿ ಭೀಷ್ಮಾದಿಗಳು ಎಂದೂ ಅಂತಹ ದುಷ್ಟಸಭೆಯಲ್ಲಿ ಮೋಜಿನಿಂದ ಆನಂದಪಡಲಿಲ್ಲ. ದುಃಖದಿಂದ ಮರುಗಿದ್ದಾರೆ. ಇಂತಹ ಸಭೆಯಲ್ಲಿ ನಮ್ಮ ಉಪಸ್ಥಿತಿ ಇದೆಯಲ್ಲಾ ಎಂದು ನೊಂದುಕೊಂಡಿದ್ದಾರೆ. ಎಲ್ಲರೂ ಅಸಹಾಯಕರಾಗಿ ಕುಳಿತಿದ್ದಾರೆ. ಸಭ್ಯರಾರೂ ದ್ಯೂತವನ್ನು ಅನುಮೋದಿಸಿಲ್ಲ. ದ್ಯೂತದಿಂದ ಸಂತೋಷವನ್ನೂ ಪಟ್ಟಿಲ್ಲ. ಹೀಗಿರುವಾಗ ಭೀಷ್ಮರನ್ನು ದ್ಯೂತದ ಮೋಜಿನಲ್ಲಿ ಪಾಲ್ಗೊಂಡರೆಂದು ಹೇಳುವುದು ಸರ್ವಥಾ ಸಲ್ಲದು.



## ದ್ರೌಪದಿಯ ಪ್ರಶ್ನೆಗೆ ಧರ್ಮವನ್ನೇಕೆ ನುಡಿಯಲಿಲ್ಲ?

ಧರ್ಮರಾಜನು ದ್ಯೂತದಲ್ಲಿ ಸೋತ ನಂತರ ದ್ರೌಪದಿಯನ್ನು (''ದಾಸಿ'' ಎಂಬುದಾಗಿ) ಅವಮಾನಗೊಳಿಸಲು ಸಭೆಗೆ ಕರೆತಂದಾಗ, ದ್ರೌಪದಿಯು ಸಭೆಯನ್ನು ಕುರಿತು ಪ್ರಶ್ನಿಸುತ್ತಾಳೆ. ಧರ್ಮರಾಜ ಸೋತೇ ಇಲ್ಲ (ಅಧರ್ಮದಿಂದ ಸೋತಿದ್ದು, ಸೋಲಲ್ಲ - ಮೋಸದ ಜೂಜಾಟ). ಧರ್ಮರಾಜ ಸೋಲದಿದ್ದ ಮೇಲೆ ನಾನೆಂತು ಸೋತೆ? ಒಂದು ಪಕ್ಷ ಧರ್ಮರಾಜ ಸೋತಿದ್ದರೆ ಅವನ ಜೊತೆಯೇ ನಾನೂ ದಾಸಿ. ನನ್ನನ್ನು ಪೃಥಕ್ಕಾಗಿ ಪಣ ಇಡಲಿಕ್ಕೆ ಹೇಗೆ ಸಾಧ್ಯ? ಆದ್ದರಿಂದ ಇದು ಅಧರ್ಮವಲ್ಲವೆ? ಎಂದಳು. ಆಗ ಭೀಷ್ಮಾದಿಗಳು ಯಾರೂ (ವಿದುರನನ್ನು ಬಿಟ್ಟು) ಧರ್ಮವನ್ನು ಹೇಳಲು ಸಮರ್ಥರಾಗಲಿಲ್ಲ. ದ್ಯೂತವನ್ನು ತಡೆಯಲು ಹೇಗೆ ಸಮರ್ಥರಾಗಲಿಲ್ಲವೋ ಹಾಗೆಯೇ ಧರ್ಮವನ್ನು ಹೇಳಲೂ ಸಮರ್ಥರಾಗಲಿಲ್ಲ. ಏಕೆಂದರೆ ಎಲ್ಲರೂ ಕಲಿಯಿಂದ ಆವೇಷ್ಟಿತರಾಗಿದ್ದರೆಂದು ಆಚಾರ್ಯರು ತಿಳಿಸಿದ್ದಾರೆ. (ಕಲಿಯ ಆವೇಶವೆಂದರೆ ಅಜ್ಞಾನದ ಆವರಣ - ಮೋಹ) (ಇತ್ಯುಕ್ತಾ ಅಪಿ ಭೀಷ್ಮಾದ್ಯಾಃ ಕಲ್ಯಾವೇಶೇನ ಮೋಹಿತಾಃ ಪೃಚ್ಛ ಧರ್ಮಜಮಿತ್ಯುಕ್ತ್ವಾ ತೂಷ್ಣೀಮೇವ ಬಭೂವಿರೇ) ಭೀಮಸೇನದೇವರ ಅಗ್ರಜನಾದ ಧರ್ಮರಾಜರಿಗೇ ಕಲ್ಯಾವೇಶದಿಂದ ಅಜ್ಞಾನ ಬಂದಿರುವಾಗ (ದ್ಯೂತವಿಷಯದಲ್ಲಿ) ಭೀಷ್ಮಾದಿಗಳಲ್ಲಿ ಕಂಡುಬಂದಿರುವುದು ಅತಿಶಯವೇನಲ್ಲ. ಭೀಷ್ಮರ ಜೀವನದಲ್ಲಿ ಇದೊಂದು ಕಹಿಪ್ರಸಂಗ. ಈ ಒಂದು ಕಹಿಪ್ರಸಂಗವನ್ನು ಬಿಟ್ಟರೆ ಪ್ರಾಯಶಃ ಭೀಷ್ಮರು ಎಂದೂ ಧರ್ಮಭ್ರಷ್ಟರಲ್ಲ, ಕರ್ತವ್ಯಭ್ರಷ್ಟರಲ್ಲ. **ಹಾಗೊಂದು ವೇಳೆ ಧರ್ಮಭ್ರಷ್ಟರಾಗಿದ್ದರೆ ಜಗತ್ತಿನ ಸೂತ್ರಧಾರಿಯಾದ ಶ್ರೀಕೃಷ್ಣ ಜಗತ್ತಿನಲ್ಲೇ ಶ್ರೇಷ್ಠವಾದ ಧರ್ಮಗಳನ್ನು ಭೀಷ್ಮರ ದೆಸೆಯಿಂದ ಯುಧಿಷ್ಠಿರನ ನೆಪದಲ್ಲಿ ಜಗತ್ತಿಗೇ ಉಪದೇಶಿಸುತ್ತಿರಲಿಲ್ಲ.** ಧರ್ಮಪ್ರಭುವಾದ ಶ್ರೀಕೃಷ್ಣನ ದೃಷ್ಟಿಯಲ್ಲಿ ಭೀಷ್ಮರು ಎಂತಹವರು ಎಂಬುದನ್ನು ಕೃಷ್ಣನ ಮಾತಿನಿಂದಲೇ ತಿಳಿಯೋಣ.

## ಶ್ರೀಕೃಷ್ಣನ ದೃಷ್ಟಿಯಲ್ಲಿ ಭೀಷ್ಮರು

ಕುರುಕ್ಷೇತ್ರ ಯುದ್ಧ ಮುಗಿದ ನಂತರ ಒಮ್ಮೆ ಧರ್ಮರಾಜರು ಕೃಷ್ಣನನ್ನು ನೋಡಲು ಹೋಗಿದ್ದಾರೆ. ಆಗ ಶ್ರೀಕೃಷ್ಣ ಧ್ಯಾನಾಸಕ್ತನಾಗಿದ್ದಾನೆ. ಧರ್ಮರಾಜರಿಗೆ ಆಶ್ಚರ್ಯ. ಜಗತ್ತಿನ ಪ್ರಭು, ಎಲ್ಲರಿಂದ ಆರಾಧ್ಯ ಯಾರನ್ನು ಆರಾಧಿಸುತ್ತಿದ್ದಾನೆ? ಹೀಗೆಂದುಕೊಂಡು ನೇರವಾಗಿ ಶ್ರೀಕೃಷ್ಣನನ್ನೇ ಕೇಳಿದ. ''ಜಗತ್ಪ್ರಭು ನಿನ್ನ ಧ್ಯಾನದ ವಸ್ತು ಯಾವುದು? ನಿನ್ನಲ್ಲಿ ಶರಣಾಗಿದ್ದೇನೆ'' ಎಂದು. ಶ್ರೀಕೃಷ್ಣ ಹೇಳಿದ -

೧. ''ಹೇ ಧರ್ಮರಾಜ! ಯಾವನು ೭ ಜನ ವಸುಗಳು ಅನುಭವಿಸಬೇಕಾದ ದುಃಖವನ್ನು ಒಬ್ಬನೇ ಏಕಕಾಲಕ್ಕೆ ಅನುಭವಿಸುತ್ತಾ, ಯಾವ ಬಾಣಗಳ ವೇದನೆಯನ್ನು ದೇವರಾಜನಾದ ಇಂದ್ರನೂ ಸಹಿಸಲಿಕ್ಕೆ ಅಶಕ್ಯವೋ ಅಂತಹ ಶರತಲ್ಪದ ಮೇಲೆ ಮಲಗಿದ್ದು ಅಪಾರ ಸಂಕಟದಿಂದ ಕೂಡಿದ್ದರೂ ನನ್ನನ್ನೇ ಸ್ಮರಣೆ ಮಾಡುತ್ತಿದ್ದಾನೋ ಅಂತಹ ಭೀಷ್ಮನಲ್ಲಿ ನನ್ನ ಮನಸ್ಸು ಆಸಕ್ತವಾಗಿದೆ.'' ಎಂದು.

೨. ಯಾವನು ಏಕಾಂಗಿಯಾಗಿ ಸಮಸ್ತ ರಾಜಮಂಡಲವನ್ನು ಗೆದ್ದು ಕಾಶೀರಾಜನ ಹೆಣ್ಣುಮಕ್ಕಳನ್ನು ತನ್ನ ತಮ್ಮಂದಿರಿಗಾಗಿ ಅಪಹರಣ ಮಾಡಿದ ವೀರಾಗ್ರಣಿಯೋ, ಅನುಜರಲ್ಲಿ ಕರುಣೆಯುಳ್ಳವನೋ,

೩. ಯಾವನು ಪುರಾಣಪುರುಷೋತ್ತಮನಾದ ೨೧ ಸಾರಿ ಭೂಪ್ರದಕ್ಷಿಣೆ ಮಾಡಿ ದುಷ್ಟ ಕ್ಷತ್ರಿಯರನ್ನು ನಾಶಮಾಡಿದ ಪರಶುರಾಮದೇವರ ಮುಂದೆ ೨೩ ದಿವಸ ಯುದ್ಧಮಾಡಿದ ಶೂರನೋ,

೪. ಯಾವನು ದೇವಸ್ತ್ರೀಯಾದ ಗಂಗೆಯ ಗರ್ಭದಿಂದ ಬಂದು ಬೃಹಸ್ಪತ್ಯಾಚಾರ್ಯರು ಹಾಗೂ ಪರಶುರಾಮರಲ್ಲಿ ಅಸ್ತ್ರ, ಶಸ್ತ್ರ, ಶಾಸ್ತ್ರಗಳನ್ನು ೫೨೫ ವರ್ಷ ಅಭ್ಯಾಸಮಾಡಿದನೋ,

೫. ಯಾವನು ಷಡಂಗಸಹಿತ ನಾಲ್ಕೂ ವೇದಗಳನ್ನು ತಿಳಿದವನೋ,

೬. ಯಾವನು ಧರ್ಮಕೋವಿದರಲ್ಲಿ ಶ್ರೇಷ್ಠನೋ, ಭೂತ, ಭವಿಷ್ಯತ್, ವರ್ತಮಾನಗಳನ್ನು ತಿಳಿದಿರುವನೋ,

೭. ಯಾವ ಪುರುಷಸಿಂಹ ಸಕಲ ಇಂದ್ರಿಯಗಳನ್ನೂ ಗೆದ್ದು ಜನ್ಮಪರ್ಯಂತ ಊರ್ಧ್ವರೇತಸ್ಕನಾಗಿರುವನೋ, ಯುವರಾಜನಾಗಿ, ನಿರೋಗಿಯಾಗಿ, ಸಮಗ್ರಾಂಗವಾಗಿ ಸ್ತ್ರೀಸಹಸ್ರರ ಮಧ್ಯೆ ಇದ್ದರೂ ವಿಚಲಿತನಾಗದ ಬ್ರಹ್ಮಚಾರಿಯೋ

೮. ಚತುರ್ವಿದ್ಯೆಗಳನ್ನು ಚತುಹೋತ್ರ (ಹೋತಾ, ಉದ್ಗಾತಾ, ಬ್ರಹ್ಮಾ, ಅಧ್ವರ್ಯು) ಚತುರಾಶ್ರಮ, ರಾಜಧರ್ಮಗಳನ್ನು ಚೆನ್ನಾಗಿ ತಿಳಿದವನೋ,

೯. ಯಾವನು ದೇವತೆಗಳನ್ನು, ಗಂಧರ್ವ, ಯಕ್ಷ, ರಾಕ್ಷಸರನ್ನು, ಅಸುರರನ್ನು ಏಕಾಂಗಿಯಾಗಿ ಜಯಿಸಲು ಶಕ್ತನೋ,



೧೦. ಮನುಷ್ಯರಲ್ಲಿ ತನ್ನ ಸಮಾನವಾದ ಗುಣವುಳ್ಳವರನ್ನು ನೋಡಲಿಲ್ಲವೋ, ಕೇಳಲಿಲ್ಲವೋ,

೧೧. ಮೂರು ಲೋಕದಲ್ಲಿ ಸತ್ಯದಲ್ಲಿ, ಧರ್ಮದಲ್ಲಿ, ವೀರ್ಯದಲ್ಲಿ, ಶೌರ್ಯದಲ್ಲಿ, ಧರ್ಮಾಚರಣೆಯಲ್ಲಿ, ಪರಾಕ್ರಮದಲ್ಲಿ, ತಪಸ್ಸಿನಲ್ಲಿ ಅವನ ಸಮಾನರಿಲ್ಲವೋ,

೧೨. ಯಾವನು ಈ ಲೋಕವನ್ನು ಬಿಟ್ಟರೆ ಜ್ಞಾನಸೂರ್ಯ ಅಸ್ತಂಗತನಾದಂತೆ, ಚಂದ್ರನಿಲ್ಲದ ಅಮಾವಾಸ್ಯೆಯಂತಹ ಕತ್ತಲಿನಂತೆ ಆಗುತ್ತದೋ ಅಂತಹ ಜ್ಞಾನಸೂರ್ಯನೆನಿಸಿದ ಪುರುಷಸಿಂಹನಾದ ಭೀಷ್ಮನಲ್ಲೇ ನನ್ನ ಮನಸ್ಸು ಆಸಕ್ತವಾಗಿದೆ. ಆದ್ದರಿಂದ ಹೇ ಯುಧಿಷ್ಠಿರ! ನಿನಗೇನಾದರೂ ಧರ್ಮ ವಿಷಯದಲ್ಲಿ ಸಂದೇಹವಿದ್ದರೆ, ಯಾವುದೇ ಧರ್ಮವನ್ನು ತಿಳಿಯಬೇಕೆಂಬ ಅಪೇಕ್ಷೆ ಇದ್ದರೆ ಭೀಷ್ಮ ಅಸ್ತಂಗತವಾಗುವುದರೊಳಗೆ ಅವನಿಂದ ತಿಳಿದುಕೋ ಎಂದು ಶ್ರೀಕೃಷ್ಣ ಆಜ್ಞಾಪಿಸುತ್ತಾನೆ.

ಶರತಲ್ಪಗತೋ ಭೀಷ್ಮಃ ಶಾಮ್ಯನ್ನಿವ ಹುತಾಶನಃ ಮಾಂ ।
ಧ್ಯಾಯತಿ ಪುರುಷ ವ್ಯಾಘ್ರಸ್ತತೋ ಮೇ ತತ್‌ಗತಂ ಮನಃ ॥

ಯಸ್ಯ ಜ್ಯಾತಂ ನಿರ್ಘೋಷಂ ವಿಸ್ಫೂರ್ಜಿತಮಿವಾಶನೇಃ ।
ನ ಸೇಹೇ ದೇವರಾಜೋಽಪಿ ತಮಸ್ಮಿ ಮನಸಾ ಗತಃ ।
ಯೇನಾಭಾಜಿತ್ಯ ತರಸಾ ಸಮಸ್ತಂ ರಾಜಮಂಡಲಮ್ ॥

ತ್ರಯೋವಿಂಶತಿ ರಾತ್ರಂ ಯೋ ಯೋಧಯಾಮಾಸ ಭಾರ್ಗವಮ್ ।
ಏಕೀಕೃತ್ಯ ಇಂದ್ರಿಯಗ್ರಾಮಂ ಮನಃ ಸಂಯಮ್ಯ ಮೇಧಯಾ ॥

ಯಂ ಗಂಗಾ ಗರ್ಭವಧಿನಾ ಧಾರಯಾಮಾಸ ಪಾರ್ಥಿವ ।
ದಿವ್ಯಾಸ್ತ್ರಾಣಿ ಮಹಾತೇಜಾ ಯೋ ಧಾರಯತಿ ಬುದ್ಧಿಮಾನ್ ॥
ಸಾಂಗಾಂಶ್ಚ ಚತುರೋ ವೇದಾನ್.......

ಸ ಹಿ ಭೂತಂ ಭವಿಷ್ಯಚ್ಚ ಭವಚ್ಚ ಭರತರ್ಷಭ ।
ವೇತ್ತಿ ಥರ್ಮವಿದಾ ಶ್ರೇಷ್ಠಂ.......

ತಸ್ಮಿನ್ ಹಿ ಪುರುಷವ್ಯಾಘ್ರೇ ಕರ್ಮಭಿಃ ಸ್ವರ್ದಿವಂ ಗತೇ ।
ಭವಿಷ್ಯತಿ ಮಹೀಪಾರ್ಥ ನಷ್ಟಚಂದ್ರೇವ ಶಾರ್ವರೀ ॥

ಚಾತುರ್ವಿದ್ಯಂ ಚಾತುಹೋತ್ರಂ ಚಾತುರಾಶ್ರಮಮೇವ ಚ ।
ರಾಜಧರ್ಮಾಂಶ್ಚ ನಿಖಿಲಾನ್ ಪೃಚ್ಛೈನಂ ಪೃಥೀವೇಪತೇ ॥

ತಸ್ಮಿನ್ ಅಸ್ತಮಿತೇ ಭೀಷ್ಮೇ ಕೌರವಾಣಾಂ ಧುರಂಧರೇ ।
ಜ್ಞಾನಾನ್ಯಸ್ತಂ ಗಮಿಷ್ಯಂತಿ ತಸ್ಮಾತ್ ತ್ವಾಂ ಚೋದಯಾಮ್ಯಹಮ್ ॥

ಈ ರೀತಿ ಶ್ರೀಕೃಷ್ಣನಿಂದ ಹೊಗಳಿಸಿಕೊಂಡ ಭೀಷ್ಮರು ಕಲಿಯುಗದಲ್ಲಿ ಧರ್ಮ-ಭ್ರಷ್ಟರಾದರೇ?

ಶ್ರೀಕೃಷ್ಣ ಭೀಷ್ಮರಲ್ಲಿ ಕಾಣದ ಅಧರ್ಮವನ್ನು ನಾವು ಕಾಣುತಿದ್ದೇವೆಯೇ?

ಏಕಿಂತಹ ಸಾಹಸದ, ಅಲ್ಲಸಲ್ಲದ, ಶ್ರೀಕೃಷ್ಣ ವಿರೋಧಿಯಾದ ಮಾತು ಭೀಷ್ಮರ ಬಗ್ಗೆ?

ಶ್ರೀಕೃಷ್ಣನ ಮಾತನ್ನು ಕೇಳಿದ ಧರ್ಮರಾಜರು ಭೀಷ್ಮರ ಬಗ್ಗೆ ಏನು ಹೇಳುತ್ತಾರೆ ನೋಡೋಣ.

**(ಮುಂದುವರೆಯುವುದು)**


## 'ಅಜಯ್ಯ ವಿಜಯೀಂದ್ರರು'

**ಜನಪ್ರಿಯ 7ನೇ ಆವೃತ್ತಿ ಬಿಡುಗಡೆ**

ಡೆಮ್ಮಿ $^{1}/_{8}$ ಆಕಾರದ ಸುಮಾರು 550 ಪುಟಗಳು!
ಸುಂದರ ವರ್ಣ ಮುಖಪುಟ!

ಹದಿನೈದನೇ ಶತಮಾನದ ಶ್ರೇಷ್ಠ ಸಂತರೂ, ಚತುಃಷಷ್ಠಿಕಲಾಪಾರಂಗತರೂ, ಚತುರಧಿಕಶತಗ್ರಂಥ ರಚನಕಾರರೂ, ಶ್ರೀವ್ಯಾಸರಾಜಗುರುಸಾರ್ವಭೌಮರ ಪ್ರಿಯಶಿಷ್ಯರೂ, ಜಗದ್ಗುರು ಶ್ರೀರಾಘವೇಂದ್ರಸ್ವಾಮಿಗಳವರ ಪರಮಗುರುಗಳೂ ಆದ ಪರಮಪೂಜ್ಯ ಶ್ರೀಶ್ರೀವಿಜಯೀಂದ್ರತೀರ್ಥ ಶ್ರೀಪಾದಂಗಳವರ ಜೀವನ - ಸಾಧನೆಗಳನ್ನು ಪರಿಚಯಿಸುವ ಶ್ರೇಷ್ಠ ಗ್ರಂಥರತ್ನವನ್ನು

ಶ್ರೀರಾಘವೇಂದ್ರಗುರುವಂಶಭೂಷಣಂ, ವಿದ್ಯಾವಾಚಸ್ಪತಿ, ಕವಿತಿಲಕ

**ದಿ. ರಾಜಾ. ಶ್ರೀಗುರುರಾಜಾಚಾರ್ಯರಿಂದ**

ರಚಿತಗೊಂಡು ಈವರೆಗೆ ಆರು ಬಾರಿ ಮುದ್ರಣಗೊಂಡ, ಜನಪ್ರಿಯಗೊಂಡ ಅಪೂರ್ವ ಗ್ರಂಥದ 7ನೇ ಮುದ್ರಣವನ್ನು ಪರಮಪೂಜ್ಯ ಶ್ರೀಶ್ರೀವಿಜಯೀಂದ್ರತೀರ್ಥ ಶ್ರೀಪಾದಂಗಳವರ ಆರಾಧನಾ ಶುಭಪರ್ವದಿನದಂದು ಕುಂಭಕೋಣದಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪ್ರಸ್ತುತ ಪೀಠಾಧಿಪತಿಗಳಾದ **ಪರಮಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು**

ಮತ್ತು ಅವರ ಪ್ರಿಯ ವರಕುಮಾರಕರಾದ

**ಪರಮಪೂಜ್ಯ ಶ್ರೀಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು**

ತಮ್ಮ ಅಮೃತಹಸ್ತದಿಂದ ಸರ್ವಜಿತ್ ಸಂವತ್ಸರದ ನಿಜ ಜ್ಯೇಷ್ಠ ಬಹುಳ ತ್ರಯೋದಶಿ ಗುರುವಾರ ದಿನಾಂಕ 12-07-2007 ರಂದು ಬಿಡುಗಡೆಗೊಳಿಸಲಿದ್ದಾರೆ.

ನಿಮ್ಮ ಪ್ರತಿಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ :

**ಶ್ರೀಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ**

ಮೊಬೈಲ್ : 98453-56528




ಲೇಖನಾಂಕ

# ಶ್ರೀರಾಮಚಾರಿತ್ರ್ಯಮಂಜರೀಯ ವೈಶಿಷ್ಟ್ಯ

**■ ವಿದ್ವಾನ್. ಎಲ್. ಕೃಷ್ಣಾಚಾರ್ಯ**
ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

**ಸಾ**ರಸ್ವತ ಪ್ರಪಂಚಕ್ಕೆ 'ಅಪರೋಕ್ಷೀಕೃತ ಶ್ರೀಶರು' ಎಂದು ಪ್ರಖ್ಯಾತಿಯನ್ನು ಹೊಂದಿದ ಶ್ರೀರಾಘವೇಂದ್ರತೀರ್ಥರ ಕೊಡುಗೆಯನ್ನು ಸಕಲ ವಿದ್ವತ್ಪ್ರಪಂಚವು ಮುಕ್ತಕಂಠದಿಂದ ಸ್ವಾಗತಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಶ್ರೀರಾಘವೇಂದ್ರತೀರ್ಥರ ವೈದುಷ್ಯವನ್ನು ಕಂಡ ಕವಿಗಳು ''ಆಚಾರ್ಯೋ ವಿಬುಧೇಶಿತುಃ ಕಲಯತೇ'' ಎಂದು ಉದ್ಗಾರವನ್ನು ಮಾಡಿದ್ದಾರೆ. ಇಂತಹ ಗುರುಸಾರ್ವಭೌಮರ ಕೃತಿಗಳು ಅನೇಕವಾಗಿವೆ. ಅವುಗಳಲ್ಲಿ ''ಶ್ರೀರಾಮಚಾರಿತ್ರ್ಯಮಂಜರೀ'' ಎಂಬುವುದೂ ಒಂದು. ಈ ಕೃತಿಯ ವೈಶಿಷ್ಟ್ಯವನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ. ಮೇರುಕೃತಿಯೆನಿಸಿದ ಶ್ರೀಮಜ್ಜಯತೀರ್ಥರಿಂದ ರಚಿತವಾದ 'ಶ್ರೀಮನ್ನ್ಯಾಯಸುಧಾ' ಗ್ರಂಥದಲ್ಲಿ ಶ್ರೀಜಯತೀರ್ಥರು ''ಸ್ಪಷ್ಟೀಕರಣಂ ಚ ಅನೇಕ ವಿಧಮ್ ಅತೀ ವಿಸ್ತೃತಸ್ಯ ಸಂಕ್ಷೇಪಃ ಅಪಿ ಏಕ ವಿಧಂ ಸ್ಪಷ್ಟೀಕರಣಂ'' ಎಂದು ಹೇಳಿದ್ದಾರೆ. ಅನೇಕ ರೀತಿಯಾದ ಸ್ಪಷ್ಟೀಕರಣದ ವಿವರಣೆಯನ್ನು ಕೊಟ್ಟು ಇದೂ ಕೂಡಾ ಒಂದು ರೀತಿಯ ಸ್ಪಷ್ಟೀಕರಣ ಎಂದು ವಿವರಿಸಿದ್ದಾರೆ. ಮೇಲೆ ಕಾಣಿಸಿದ ಶ್ರೀನ್ಯಾಯಸುಧೆಯ ವಾಕ್ಯದ ತಾತ್ಪರ್ಯ ಈ ರೀತಿಯಾಗಿದೆ - ಯಾವುದಾದರೊಂದು ವಿಷಯವನ್ನು ವಿಸ್ತಾರವಾಗಿ ಹೇಳಿದ್ದರೆ ಅದನ್ನು ಕ್ಲುಪ್ತವಾದ ಮಾತುಗಳಲ್ಲಿ ಸಂಗ್ರಹಿಸಿ ಹೇಳುವುದೂ ಕೂಡಾ ಒಂದು ಬಗೆಯಾದ ಸ್ಪಷ್ಟೀಕರಣ. ಇದಕ್ಕೆ ಉದಾಹರಣೆಗಾಗಿ ಶ್ರೀಗುರುಸಾರ್ವಭೌಮರಿಂದ ರಚಿತವಾದ ''ಶ್ರೀರಾಮಚಾರಿತ್ರ್ಯಮಂಜರೀ'' ಎಂಬ ಕೃತಿಯನ್ನು ಸ್ವೀಕರಿಸುವುದು ಅತ್ಯಂತ ಸಮಂಜಸವಾಗುತ್ತದೆ.

ಶ್ರೀರಾಮಾಯಣವು ಇಪ್ಪತ್ನಾಲ್ಕು ಸಾವಿರ (೨೪,೦೦೦) ಗ್ರಂಥಾಕ್ಷರಗಳಿಂದ ಕೂಡಿದ್ದು, ಇಂತಹ ರಾಮಾಯಣದಲ್ಲಿ ಪ್ರತಿಪಾದಿತವಾದ ಕಥೆಯನ್ನು 'ಸ್ರಗ್ಧರಾವೃತ್ತ'-ದಿಂದ ಕೂಡಿದ ಕೇವಲ ಹನ್ನೊಂದು (೧೧) ಶ್ಲೋಕಗಳಲ್ಲಿ ಮೂಲರಾಮಾಯಣದ ಕಥೆಗೆ ಚ್ಯುತಿಯಿಲ್ಲದಲೆ ಸಂಗ್ರಹಿಸಿದ ಮಹಾನುಭಾವರು ಶ್ರೀಮಂತ್ರಾಲಯಪ್ರಭುಗಳು.

ಇವರ ಗ್ರಂಥಗಳು ಮೂಲಕಾರರ ಅಭಿಪ್ರಾಯವನ್ನು ಯಾವಾಗಲೂ ಮನಸ್ಸಿನಲ್ಲಿ ಧರಿಸಲು ಅತ್ಯಂತ ಉಪಯುಕ್ತವಾದವುಗಳು.

''ಮುಹುಃ ಸ್ಮಾರಿತ ವಾಲ್ಮೀಕಿಂ'' ಎಂಬುದಾಗಿ ಕವಿಗಳ ಮಾತನ್ನು ಅಕ್ಷರಶಃ ಸಾರ್ಥಕವಾಗುವಂತೆ ಮಾಡಿದ ಮಹಾಜ್ಞಾನಿಗಳು.

ಇಂತಹ ರಾಮಚಾರಿತ್ಯಮಂಜರಿಯಲ್ಲಿ ವಾಲ್ಮೀಕಿ ರಾಮಾಯಣದ ಏಳು ಕಾಂಡಗಳ ಸಾರವನ್ನು ಪ್ರತಿ ಶ್ಲೋಕದಲ್ಲಿ ಸಂಗ್ರಹಿಸಿ ರಾಮಚಂದ್ರನ ಅನುಗ್ರಹವು ನಮ್ಮೆಲ್ಲರ ಮೇಲೆ ಆಗುವಂತೆ ಮಾಡಿದ ಮಹಾಕಾರುಣ್ಯಪುರುಷರು.

ಆ ರಾಮಚಾರಿತ್ರ್ಯಮಂಜರಿಯ ಮೊದಲನೇ ಶ್ಲೋಕದಲ್ಲಿ ಬಾಲಕಾಂಡದ ಕಥೆಯನ್ನು ಸುಲಭವಾದ ಶಬ್ದಗಳ ಪ್ರಯೋಗದಿಂದ ಆಬಾಲವೃದ್ಧರಿಗೂ ರಾಮಚಂದ್ರನ ಬಾಲ್ಯದ ಕಥೆಯನ್ನು ಸ್ಪಷ್ಟೋಕ್ತಿಗಳಿಂದ ಅರ್ಥಾನುಸಂಧಾನಪೂರ್ವಕ ಪ್ರತಿನಿತ್ಯ ಪಾರಾಯಣಕ್ಕೆ ಅನುಕೂಲವಾಗುವ ರೀತಿಯಲ್ಲಿ ವರ್ಣಿಸಿದ್ದಾರೆ.

**ಶ್ರೀಮಾನ್ ವಿಷ್ಣುಃ ಪ್ರಜಾತೋ ದಶರಥ ನೃಪತೇ ರಾಮ**
**ನಾಽಮಾಥನೀತೋ ವಿಶ್ವಾಮಿತ್ರೇಣ ಮಂತ್ರ್ಯಾಹೃತ**
**ನುಜಸಹಿತ ಸ್ತಾಟಕಾ ಘಾತುಕೋಽಸ್ತ್ರಮ್ ।**

**ಬ್ರಹ್ಮಾದ್ಯಂ ಪ್ರಾಪ್ಯ ಹತ್ವಾ ನಿಶಿಚರನಿಕರಂ ಯಜ್ಞಪಾಲೋ**
**ವಿಮೋಚ್ಯಾಽಹಲ್ಯಾಶಾಪಂ ಚ ಭಂಕ್ತ್ವಾ ಶಿವಧನು**
**ರುಪಯನ್ ಜಾನಕೀಂ ನಃ ಪ್ರಸೀದೇತ್ ॥ ೧ ॥**

**ಭಾವಾರ್ಥ :-** ಶ್ರೀಮನ್ನಾರಾಯಣನು ಬ್ರಹ್ಮಾದಿಗಳ ಪ್ರಾರ್ಥನೆಯಂತೆ ರಘುಕುಲಾಗ್ರೇಸರನಾದ ದಶರಥ ರಾಜನಿಗೆ ಮಗನಾಗಿ ಪ್ರಾದುರ್ಭೂತನಾಗಿ ಬಾಲ್ಯಲೀಲೆಗಳಿಂದ ತನ್ನ ತಂದೆಯನ್ನು ಸಂತೋಷಪಡಿಸುತ್ತಿರಲು ವಿಶ್ವಾಮಿತ್ರರ ಯಜ್ಞರಕ್ಷಣೆಗೆ ಅವರ ಪ್ರಾರ್ಥನೆಯಂತೆ ಯಜ್ಞವನ್ನು ನಿರ್ವಿಘ್ನವಾಗಿ ಸಮಾಪ್ತಿ ಮಾಡಿ ಅದರಿಂದ ಅವರನ್ನು ಸಂತೋಷಪಡಿಸಿ, ಆ ವಿಶ್ವಾಮಿತ್ರರಿಂದ ಕೂಡಿಕೊಂಡು ಸಿದ್ಧಾಶ್ರಮಕ್ಕೆ ಬಂದು ಅಲ್ಲಿ ಅನೇಕ ಋಷಿಗಳ ಮಧ್ಯದಲ್ಲಿ ತಾನೂ ಕೂಡಾ ತಪಸ್ಸನ್ನು ಮಾಡಿದಂತೆ ನಟಿಸಿ ಅನೇಕ ದಿವ್ಯಾಸ್ತ್ರಗಳನ್ನು ಪಡೆದುಕೊಂಡು ಬ್ರಹ್ಮ-ರುದ್ರಾದಿಗಳಿಂದ ಅವಧ್ಯತ್ವವನ್ನು ಹೊಂದಿದ ಲೋಕಕಂಟಕರಾದ ತಾಟಕಾ, ಖರ ಇವರೇ ಮೊದಲಾದ ದುಷ್ಟ ರಾಕ್ಷಸರನ್ನು ಅನಾಯಾಸವಾಗಿ ಸಂಹರಿಸಿ ಲಕ್ಷ್ಮಣ ಸಹಿತನಾಗಿ



ವಿದೇಹರಾಜರಿಂದ ಘೋಷಿಸಲ್ಪಟ್ಟ ಸ್ವಯಂವರ ಮಂಟಪಕ್ಕೆ ಬಂದು ವಿಶ್ವಾಮಿತ್ರರಿಂದ ಪ್ರೇರಿತನಾಗಿ ಶಿವಧನುಸ್ಸನ್ನು ಮುರಿದು ಜಾನಕಿಯನ್ನು ಸ್ವೀಕರಿಸಿದವನಾಗಿ ಮಾರ್ಗಮಧ್ಯದಲ್ಲಿ ಗೌತಮ ಋಷಿಗಳ ಶಾಪಕ್ಕೆ ಭಾಗಿಯಾದ ಅಹಲ್ಯೆಗೆ ಶಾಪದಿಂದ ಯಾರು ಮುಕ್ತಿಯನ್ನು ಕೊಟ್ಟರೋ ಅಂತಹ ರಾಮಚಂದ್ರನು ನಮ್ಮಲ್ಲಿ ಪ್ರಸನ್ನನಾಗಲಿ ಎಂದು ಈ ಶ್ಲೋಕದ ಭಾವಾರ್ಥ.

ಇಂತಹ ಶ್ರೀರಾಮಚಾರಿತ್ರ್ಯಮಂಜರೀ ಎಂಬ ಸ್ತೋತ್ರದ ಪ್ರತಿ ಶ್ಲೋಕಗಳಲ್ಲಿರುವ ಶಬ್ದಗಾಂಭೀರ್ಯ ಮತ್ತು ಅರ್ಥಗಾಂಭೀರ್ಯಗಳ ರುಚಿಯನ್ನು ಆಸ್ವಾದಿಸುತ್ತಾ ಪಾರಾಯಣ ಮಾಡುವಾಗ ಆಗುವ ಆನಂದವನ್ನು ಅನುಭವಿಸುವವರೇ ಧನ್ಯರು.

ಅಪರೋಕ್ಷಜ್ಞಾನಿಗಳು ಮಾಡಿದ ಸ್ತೋತ್ರದ ಪ್ರತಿಪದ ವಾಕ್ಯಗಳಲ್ಲಿ ಭಗವಂತನ ಮಹತ್ವವು ಓತಪ್ರೋತವಾಗಿ, ನೈಜಿಕವಾಗಿ, ಹಾಸುಹೊಕ್ಕಾಗಿರುತ್ತದೆ.

ಇದರಲ್ಲಿರುವ ಪ್ರತಿ ಶ್ಲೋಕವನ್ನು ಪಾರಾಯಣ ಮಾಡುವಾಗ ರುದ್ರದೇವರು ''ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ'' ಎಂದು ಹೇಳಿದ್ದನ್ನು ಅನುಸಂಧಾನ ಮಾಡಿಕೊಳ್ಳಬೇಕು. ಆದರೆ ಪಾರ್ವತೀದೇವಿಯವರನ್ನು ಕುರಿತು ರುದ್ರದೇವರು ''ರಾಮನಾಮವನ್ನು ಜಪಿಸಿದರೆ ಸಹಸ್ರನಾಮದ ಫಲವನ್ನು ಹೊಂದಲು ಸಾಧ್ಯವಾಗುತ್ತದೆ'' ಎಂಬ ಮಾತನ್ನು ಅನುಸಂಧಾನ ಮಾಡಿಕೊಂಡಾಗ ಶ್ರೀಗುರುಸಾರ್ವಭೌಮರ ಮತ್ತು ಅವರ ಅಂತರ್ಯಾಮಿಯಾದ ಭಾರತೀಶನ ಹಾಗೂ ಸೀತಾಪತಿ ಶ್ರೀರಾಮಚಂದ್ರನ ಅನುಗ್ರಹ ನಮ್ಮ ಮೇಲೆ ಆಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇಂತಹ ಭಗವಂತನ ಸಮುದ್ರಪ್ರಾಯವಾದ, ನಿತ್ಯನೂತನಗಳಾದ ಮಹಿಮೆಗಳನ್ನು ಸಂಗ್ರಹಮಾಡುವುದರಲ್ಲಿ ಶ್ರೀಗುರುಸಾರ್ವಭೌಮರು ಸಿದ್ಧಹಸ್ತರು.

ಇಂತಹ ಶ್ರೀರಾಮಚಾರಿತ್ರ್ಯಮಂಜರೀ ಕರ್ತೃಗಳಾದ ಶ್ರೀಮಂತ್ರಾಲಯ ಪ್ರಭುಗಳ ಅನುಗ್ರಹವು ನಮ್ಮ ಮೇಲೆ ಸದಾ ಇರುವಂತೆ ಪ್ರಾರ್ಥಿಸಿ ವಿರಮಿಸುತ್ತೇನೆ.

**"ಶ್ರೀರಾಘವೇಂದ್ರಗುರವೇ ನಮೋಽತ್ಯಂತ ದಯಾಲವೇ"**

❑❑

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ
ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.
ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ
ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.
ವಿಳಾಸಗಳು ಮುಖಪುಟದಲ್ಲಿವೆ.

ಲೇಖನಾಂಕ

# ಋಗ್ವೇದಕಾಲೀನ ದೇವತೆಗಳು

## (ಆಧುನಿಕ ವಿದ್ವಾಂಸರ ದೃಷ್ಟಿಯಲ್ಲಿ)

### ಭಾಗ – ೪ : ವಿಷ್ಣು

■ ಡಾ. ಕೊರಟಗೆರೆ ವಾಸುದೇವಾಚಾರ್ಯ

ನಂ. ೧೪, ಶ್ರೀನಿವಾಸ ಕೃಪ, ದೇವನೂರು ರಸ್ತೆ, ತುಮಕೂರು - ೫೭೨ ೧೦೨

ಹಿಂದಿನ ಸಂಚಿಕೆಯಿಂದ.......

**ಋ**ಗ್ವೇದದಲ್ಲಿನ ಮೂಲದೇವತೆಗಳಲ್ಲಿ ವಿಷ್ಣು ಸಹ ಒಬ್ಬ. ಜಗತ್ತನ್ನು ಸೃಷ್ಟಿಸಿ ರಕ್ಷಿಸುವ ಭಕ್ತಿ ಈತನ ಸಾಮಾನ್ಯ ಲಕ್ಷಣ.

(**'ಓಂ ಜನ್ಮಾದ್ಯಸ್ಯ ಯತಃ ಓಂ'** - ಬ್ರಹ್ಮಸೂತ್ರ.ನಿ. ಪಾದ ೧, ಅ. ೧)

ದ್ಯುಸ್ಥಾನದೇವತೆ ಋಗ್ವೇದದಲ್ಲಿ ಆರು ಸೂಕ್ತಗಳು ಮುಖ್ಯವಾಗಿ ವಿಷ್ಣುವನ್ನು ಕುರಿತು ಹೇಳುತ್ತವೆ. ಇಲ್ಲಿ ಉದಾಹರಿಸಿರುವ ಒಂದು ಸೂಕ್ತದಲ್ಲಿ ಆರು ಮಂತ್ರ-ಗಳಿವೆ. ಆಧುನಿಕರ ದೃಷ್ಟಿಯಲ್ಲಿ ಋಗ್ವೇದದಲ್ಲಿ ವಿಷ್ಣುವಿನ ಸ್ಥಾನ ಪ್ರಮುಖವಲ್ಲ. ಆತನ ಮುಖ್ಯ ಲಕ್ಷಣ ಮೂರು ಪಾದನ್ಯಾಸಗಳು. ಈ ರೀತಿ ಈತ ಮಾನವಾಕಾರದಿಂದ ಆರೋಪಿತನಾಗಿದ್ದಾನೆ.

### ಆರು ಮಂತ್ರಗಳ ಸಾರಾಂಶ

ಮೂರು ಪಾದನ್ಯಾಸದಿಂದ (ತ್ರೇಧಾನಿಚಕ್ರಮಾಣಃ) ಅವನಿಗೆ ಉರುಗಾಯಃ (ವಿಸ್ತೃತಗಾಮಿ) ಉರುಕ್ರಮಿ (ದೀರ್ಘವಾಗಿ ಹೆಜ್ಜೆ ಹಾಕುವವನು) ಇತ್ಯಾದಿಯಾಗಿ ವರ್ಣನೆಯಿದೆ. ಆತನು ಪೃಥಿವ್ಯಾದಿ ಎಲ್ಲ ಲೋಕಗಳನ್ನು ವ್ಯಾಪಿಸಿದ್ದಾನೆ. ಆತನ ಎರಡು ಪಾದಗಳು ಮನುಷ್ಯಗೋಚರ. ಮೂರನೆಯ ಪಾದವು ಮನುಷ್ಯರ, ಪಕ್ಷಿಗಳ ದೃಷ್ಟಿಪಥವನ್ನು ಮೀರಿದೆ. ವಿಷ್ಣುವಿನ ಅತ್ಯಂತ ಉನ್ನತ ಪಾದನ್ಯಾಸವು ಕಣ್ಣಿನಂತೆ ಸ್ವರ್ಗದಲ್ಲಿ ಸೇರಿ ಪ್ರಕಾಶಮಾನವಾಗಿದೆ. ಆತನ ತ್ರಿಪಾದನ್ಯಾಸದಲ್ಲಿ ಎಲ್ಲ ಜೀವಜಂತು-ಗಳೂ ಬದುಕಿವೆ. ಆತನು ತ್ರಿಪಾದನ್ಯಾಸದಿಂದ ತ್ರಿಲೋಕಗಳ ವ್ಯಾಪ್ತಿ ಹಾಗೂ ಧಾರಣೆ-ಯನ್ನು ಪಡೆದಿದ್ದಾನೆ. ಆತನ ಹೆಜ್ಜೆಗಳೇ ಅಮೃತಮಯ. ಆತನ ಸ್ಥಾನ (ವೈಕುಂಠ) ಅಮೃತಮಯ. (**'ಅಮೃತಂ, ಕ್ಷೇಮಂ, ಅಭಯಂ'** - ಶ್ರೀಮದ್ಭಾಗವತ, ಸ್ಕಂ.೨) ಅಲ್ಲಿ ದೇವತೆಗಳೂ ಪುಣ್ಯಾತ್ಮರೂ ವಾಸಿಸುತ್ತಾರೆ.



ವಿಷ್ಣುವಿನ ಮೂರು ಪಾದಗಳ ನ್ಯಾಸವೆಂದರೆ ಸ್ವರ್ಗ, ಭೂಮಿ, ಅಂತರಿಕ್ಷ. ಈ ಲೋಕಗಳು ಸೂರ್ಯಚಲನಾಕ್ರಮದ ದ್ಯೋತಕವೆಂದು ಆಧುನಿಕ ವಿದ್ವಾಂಸರ ಅಭಿಪ್ರಾಯ. ಆತನು ನಾಲ್ಕು ಹೆಸರಿನ ತೊಂಭತ್ತು ಕುದುರೆಗಳನ್ನು ಚಲಿಸುವಂತೆ ಮಾಡುತ್ತಾನೆ ಎಂದು ಹೇಳಿದೆ. ಅಂದರೆ ೯೦ × ೪ = ೩೬೦. ಸೌರಮಾನ ಸಂವತ್ಸರದ ೩೬೦ ದಿನಗಳ ಒಂದು ಸಂಕೇತವೆನಿಸುತ್ತದೆ. ಏವಂ ಚ, ಈ ವಿಷ್ಣುವು ಸೂರ್ಯನ ಚಲನೆಯಲ್ಲಿ ವ್ಯಕ್ತಿತ್ವಾರೋಪಣೆಯ ಮೂಲಕ ಬಂದ ದೇವತೆಯಾಗಿದ್ದಾನೆ.

ಇಂದ್ರನಿಗೂ, ಈತನಿಗೂ ಸ್ನೇಹವಿದೆ ಎಂಬುದು ವಿಶೇಷ ಲಕ್ಷಣ. ವೃತ್ರ - ಇಂದ್ರ ಯುದ್ಧದಲ್ಲಿ ವಿಷ್ಣು ಆತನಿಗೆ ಸಹಾಯ ಮಾಡಿದ್ದಾನೆ.

(**'ಇಂದ್ರಸ್ಯಾರ್ಥೇ ಕಥಂ ದೈತ್ಯಾನವಧೀದ್ವಿಷಮೋ ಯಥಾ'** - ಶ್ರೀಮದ್ಭಾಗವತ ಸ್ಕಂ. ೭, ಅ. ೧, ಶ್ಲೋ. ೧, ಉತ್ತರಾರ್ಧ)

'ಇಂದ್ರ - ವಿಷ್ಣು' ಎಂದು ಮಂತ್ರವೊಂದರಲ್ಲಿ ದೇವತಾದ್ವಂದ್ವದ ವರ್ಣನೆ ಇದೆ. ಮರುತ್ತುಗಳು ಇಂದ್ರನ ಮೂಲಕ ವಿಷ್ಣುವಿನ ಸ್ನೇಹಿತರು. ವಿಷ್ಣುವು ಒಬ್ಬ ಸೌರದೇವತೆ (**'ದ್ವಾದಶಾದಿತ್ಯರಲ್ಲಿ 'ವಿಷ್ಣು'ವೂ ಒಬ್ಬ'** - ಶ್ರೀಮದ್ಭಾಗವತ ಸ್ಕಂ. ೧೨) ಎಂದು ತಿಳಿಸಿದೆ.

ವಿಷ್ಣುಸೂಕ್ತದ ಮಂತ್ರಗಳ ಬಗ್ಗೆ ಸ್ವಲ್ಪ ವಿವೇಚನೆ -

**ಮಂತ್ರ ೧ : "ವಿಷ್ಣೋರ್ನುಕಂ ವೀರ್ಯಾಣಿ...... ಉರುಗಾಯಃ"**

ವೇದಾಭಿಮಾನಿದೇವತೆ ಹೇಳುತ್ತಾನೆ - ನಾನು ನಿಜವಾಗಿಯೂ ವಿಷ್ಣುವಿನ ಸಾಹಸ ಕಾರ್ಯಗಳನ್ನು ವರ್ಣಿಸುತ್ತೇನೆ. ಅವನು ಲೋಕಗಳನ್ನು ಅಳತೆ ಮಾಡಿದ್ದಾನೆ. ಮೂರು ಪಾದಗಳ ಮೂಲಕ ಊರ್ಧ್ವಲೋಕವನ್ನು ವ್ಯಾಪಿಸಿದನು.

(ವಿಶೇಷ : ಶ್ರೀಮದ್ಭಾಗವತ ದ್ವಿತೀಯ ಸ್ಕಂಧದಲ್ಲಿ ಬ್ರಹ್ಮದೇವರು ಶ್ರೀನಾರದ-ರಿಗೆ ಇದನ್ನೇ ಉಪದೇಶಿಸಿದ್ದಾರೆ)

**ವಿಷ್ಣೋರ್ನು ವೀರ್ಯ ಗಣಾನಾಂ ಕತಮೋऽರ್ಹತೀಹ ।**
**ಯಃ ಪಾರ್ಥಿವಾನಿ ಕವಿರ್ವಿಮಮೇರಜಾಂಸಿ ।**
**ಚ ಸ್ಕಂಭ ಯಃ ಸ್ವರಭಸಾತ್ ಸ್ಖಲನಾತ್ ತ್ರಿಪೃಷ್ಠಮ್ ।**
**ಯನ್ಮಾಂ ನಿಶಮ್ಯ ಸದನಾದುರುಕಂಪಮಾನಮ್ ।**
**(ಇದು ತ್ರಿವಿಕ್ರಮಾವತಾರದ ಸಂಕೇತವೂ ಹೌದೂ)**

"ತ್ರಿವಿಕ್ರಮ ತವ ವಿಕ್ರಮಂ ಗಣಯಿತುಂ ಫಣೀ ನ ಶಕ್ಯತೇ...."

– ತೀರ್ಥಪ್ರಬಂಧ, ಶ್ರೀಶ್ರೀವಾದಿರಾಜತೀರ್ಥರು

**ಸಾಯಣಭಾಷ್ಯ** : ವಿಷ್ಣೋಃ ವ್ಯಾಪನಶೀಲಸ್ಯ ದೇವಸ್ಯ ನುಕಂ = ಅತಿಶೀಘ್ರಂ ಪ್ರಮೋಚಂ = ಪ್ರಬ್ರವೀಮಿ. ವಿಮಮೇ = ವಿಶೇಷೇಣ ನಿರ್ಮಮೇ. ಅತ್ರ ತ್ರಯೋ ಲೋಕಾ ಅಪಿ ಪೃಥಿವೀ ಶಬ್ದವಾಚ್ಯಾಃ।... ಲೋಕತ್ರಯಾಶ್ರಯ ಭೂತಮ್ ಅಂತರಿಕ್ಷಮ್ ಅಸ್ಕಭಾಯತ್ ಸ್ತಂಭಿತವಾನ್ (ಉರುಗಾಯಃ = ಮಹದ್ಭಿಃ ಗೀಯಮಾನಃ).

ಉರುಗಾಯ ಎನ್ನುವುದಕ್ಕೆ ಮ್ಯಾಗ್ಡೋನಲ್ ಎಂಬ ಪಾಶ್ಚಾತ್ಯ ವಿದ್ವಾಂಸನು ವಿಸ್ತೃತಗಾಮಿ (wide going) ಎಂದು ಅರ್ಥಮಾಡಿದ್ದಾನೆ.

**ಮಂತ್ರ ೨ : "ಪ್ರತದ್ವಿಷ್ಣುಃ ಸ್ತವತೇ ವೀರ್ಯೇಣ......ವಿಶ್ವಾಃ"**

ವಿಷ್ಣುವಿನ ಮೂರು ವಿಸ್ತೃತ ಹೆಜ್ಜೆಗಳಲ್ಲಿ ಎಲ್ಲ ಜೀವರೂ ವಾಸಿಸುತ್ತಾರೆ. ಈತ ಸ್ವೇಚ್ಛೆಯಾಗಿ ಸಂಚರಿಸುತ್ತಾನೆ. ಪರ್ವತಗಳಲ್ಲಿ ನೆಲೆಸಿರುತ್ತಾನೆ.

ಇಲ್ಲಿನ 'ಮೃಗ' ಶಬ್ದಕ್ಕೆ ಸಾಯಣಾಚಾರ್ಯರು 'ಸಿಂಹ' ಎಂದು ಅರ್ಥಮಾಡಿ 'ಕುಚರ' ಎಂದರೆ 'ಕುತ್ಸಿತ ಹಿಂಸಾದಿಕರ್ತಾ', 'ದುರ್ಗಪ್ರದೇಶ ಗಂತಾ ವಾ' ಎಂದು ತಿಳಿಸಿದ್ದಾರೆ. ಮ್ಯಾಗ್ಡೋನಲ್‌ರವರು 'ಮೃಗ' ಶಬ್ದಕ್ಕೆ 'ಗೂಳಿ' ಎಂದು ಹೇಳಿದ್ದಾರೆ. 'ಗಿರಿಷ್ಠಾಃ' ಎಂಬ ಪದಕ್ಕೆ ಸಾಯಣರು 'ಗಿರಿ ಮಂತ್ರಾದಿ ರೂಪಾಯಾಂ ವಾಚಿ ಸರ್ವದಾ ವರ್ತಮಾನಃ' (ಮಂತ್ರಾದಿ ರೂಪದ ವಾಕ್ಕುಗಳಲ್ಲಿರುವವನು) ಎಂದು ಉತ್ತಮ- ವಾದ ಅರ್ಥವನ್ನು ಬರೆದಿದ್ದಾರೆ. ಇದು 'ಪರ್ವತದಲ್ಲಿ ಸಂಚರಿಸುವವ' ಎಂಬ ಪಾಶ್ಚಾತ್ಯ ವಿದ್ವಾಂಸನ ಮಾತಿಗಿಂತ ಉತ್ತಮವಾಗಿದೆ.

**ಮಂತ್ರ ೩ : "ಪ್ರವಿಷ್ಣವೇ ಶೂಷಮೇತು......ತ್ರಿಭಿರಿತ್ಪದೇಭಿಃ"**

ಉತ್ಸಾಹದಾಯಕವಾದ ಈ ಸ್ತೋತ್ರ ವಿಷ್ಣುವಿಗೆ ಸೇರಲಿ, ಆತ ಗಿರಿವಾಸಿ, ವಿಸ್ತೃತಗಾಮಿ. ಅತ ಕೇವಲ ಮೂರು ಹೆಜ್ಜೆಗಳಿಂದ ವಿಸ್ತೃತವಾದ ಮೂರು ಲೋಕ-ಗಳನ್ನು ವ್ಯಾಪಿಸಿದ್ದಾನೆ.

(ಸಾಯಣಭಾಷ್ಯ : ವಿಷ್ಣು = ವ್ಯಾಪ್ತನಾದವನು, ಶೂಷಂ = ಯಾಗಾದಿಕರ್ಮ-ಜನ್ಯವಾದ, ಮನ್ಮ ಎಂದರೆ ಸ್ತೋತ್ರ.)



**ಮಂತ್ರ ೪ : "ಯಸ್ಯ ತ್ರೀಪೂರ್ಣ.......ವಿಶ್ವಾ"**

ವಿಷ್ಣುವಿನ ಮೂರು ಹೆಜ್ಜೆಗಳು ಮಧುವಿನಿಂದ ಪೂರ್ಣವಾಗಿವೆ. ಕ್ಷೀಣವಾಗದೆ ಹರ್ಷದಿಂದ ಆನಂದಿಸುತ್ತವೆ. ಈ ಪಾದಗಳಾಶ್ರಯಿಗಳೂ ಹಾಗೆಯೇ ಆನಂದಿಸುತ್ತಾರೆ.

**ಮಂತ್ರ ೫ : "ತದಸ್ಯಪ್ರಿಯಮಭಿ.......ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ"**

ಇಲ್ಲಿ ದೇವತಾನುಗ್ರಹ ಬಯಸುವ ಮಾನವರು ಆನಂದಿಸುತ್ತಾರೆ. ನಾನು ಅವನ ಪ್ರಿಯಲೋಕವನ್ನು ಸೇರುತ್ತೇನೆ. ಆ ಲೋಕವು ದೀರ್ಘವಾದ ಹೆಜ್ಜೆಯಿಡುವ ಅವನಿಗೆ ಸಂಬಂಧಿಸಿದೆ. ವಿಷ್ಣುವಿನ ಪರಮಪದದಲ್ಲಿ ಮಧುವಿನ ಬುಗ್ಗೆಯೇ ಇದೆ.

(ಇಲ್ಲಿ ವಿಷ್ಣೋಃ ವ್ಯಾಪಕಸ್ಯ, ಪರಮೇಶ್ವರಸ್ಯ, ಮಧು = ಸುಧಾರೂಪಸ್ಯ.... ಮೊದಲಾದ ವ್ಯಾಖ್ಯಾನವು ವೇದಾಂತಕ್ಕೆ ಅವಿರೋಧವಾಗಿರುವುದು ಗಮನಾರ್ಹ).

**ಮಂತ್ರ ೬ : "ತಾ ವಾಂ ವಸುಸ್ತೂಶ್ಮಸಿ.....ಭಾತಿ ಭೂರಿ"**

ಎಲೈ ವಿಷ್ಣುವೇ, ಅಲ್ಲಿ ಅನೇಕ ಶೃಂಗಗಳುಳ್ಳ, ಶೀಘ್ರಗಾಮಿ ಗೂಳಿಗಳು ಇವೆ. ಅಂತಹ ನಿಮ್ಮಿಬ್ಬರ ಸ್ಥಾನಕ್ಕೆ ನಾನು ಹೋಗಲು ಇಚ್ಛಿಸುತ್ತೇನೆ. ಅಲ್ಲಿ ನಿಜವಾಗಿಯೂ ಆ ವಿಸ್ತೃತಗಾಮಿಯಾದ ಗೂಳಿಯ ಶ್ರೇಷ್ಠವಾದ ಸ್ಥಾನವು ಅತಿಪ್ರಕಾಶಮಾನವಾಗಿದೆ.

ಇಲ್ಲಿ 'ವಾಂ' ನಿಮ್ಮಿಬ್ಬರ ಎಂದರೆ ಇಂದ್ರ - ವಿಷ್ಣು ವಾಸಿಸುವ ಜಾಗವೆಂದರ್ಥ. ಗಾವಃ ಎಂದರೆ ಗೋವುಗಳು. 'ಗೋ' - ಶಬ್ದದ ಬಹುವಚನ. ಆದರೆ ಸಾಯಣಾ-ಚಾರ್ಯರು, ಯಾಸ್ಕಾಚಾರ್ಯರು 'ಗಾವಃ' ಎಂದರೆ 'ಕಿರಣ'ಗಳು ಎಂದು ಅರ್ಥೈಸಿದ್ದಾರೆ. (ಗೋ - ಶಬ್ದಕ್ಕೆ ಕಿರಣಗಳು ಎಂದೂ ಅರ್ಥವಿದೆ. ಗೋತತೀಸ್ತತ್ತ್ವಯುಕ್ತಾಃ = ಶ್ರೀಸುಮಧ್ವವಿಜಯ)

ಮ್ಯಾಗ್ಡೂನಲ್ ಸಹ ಸಹಮತ ಎತ್ತಿದ್ದಾನೆ. 'ರೋತ್' ಎಂಬ ವಿದ್ವಾಂಸನು 'ಗಾವಃ' ಎಂದರೆ ನಕ್ಷತ್ರಗಳು ಎಂದು ಹೇಳಿದ್ದಾನೆ.

ಸಾಯಣರ ರೀತಿಯಲ್ಲಿ 'ವಾಂ' ಎಂದರೆ 'ಪತ್ನೀಯಜಮಾನೌ' ಎಂದು ಮ್ಯಾಗ್ಡೂನಲ್ 'ಇಂದ್ರ - ವಿಷ್ಣು' ಎಂದು ಹೇಳಿದ್ದಾನೆ.

ಹೀಗೆ ಆಧುನಿಕರ ಈ ಸೂಕ್ತಾರ್ಥವು 'ಪುರುಷಸೂಕ್ತ'ದ 'ತ್ರಿಪಾದೂರ್ಧ್ವ ಉದಯತ್ಪುರುಷಃ..... ತ್ರಿಪಾದಸ್ಯ ಅಮೃತಂ ದಿವಿ' ಮೊದಲಾದ ಪುರುಷಸೂಕ್ತದ ಕೆಲವು 'ಋಕ್'ಗಳ ಸಾಮೀಪ್ಯಾರ್ಥವನ್ನು ನೀಡುತ್ತವೆ.

**(ಮುಂದುವರೆಯುವುದು)**

# ಶ್ರೀಸರಸ್ವತೀ ಟೂರ್ಸ್ ಅಂಡ್ ಟ್ರಾವೆಲ್ಸ್

ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059. **ದೂ. 044-22390890**

(೨೦೦೨ ಮತ್ತು ೨೦೦೪ ರಲ್ಲಿ ಚೆನ್ನೈನಲ್ಲಿರುವ ಅತ್ಯುತ್ತಮ ಯಾತ್ರಾ ಪ್ರವಾಸೋದ್ಯಮವೆಂದು ಪ್ರಶಸ್ತಿ ಪಡೆದಿದೆ)

**ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2, ಪ್ರವಾಸ 3 ಮತ್ತು ಪ್ರವಾಸ 5 ಕ್ಕೆ ಅವರ ವಾಸಸ್ಥಳದಿಂದ ಹೋಗಿ ಬರುವ ರೈಲ್ವೇ II Sitting Class Ticket ವೆಚ್ಚವೂ ಸೇರಿದೆ. ಶ್ರೀಬದರೀನಾರಾಯಣನ ಅನುಗ್ರಹದೊಂದಿಗೆ, 2007 ರಲ್ಲಿ ಕೆಳಗಿನ ತೀರ್ಥಯಾತ್ರಾ ಪ್ರವಾಸಗಳನ್ನು ಚೆನ್ನೈನಿಂದ ವ್ಯವಸ್ಥೆ ಮಾಡಲಾಗಿದೆ.**

**ಪ್ರವಾಸ 1**

**ದಿನಾಂಕ 14-07-2007, 04-08-2007 ಮತ್ತು 30-09-2007 ರಿಂದ 10 ದಿನಗಳು**
**ಕಾಶೀ / ಗಯಾ ಯಾತ್ರಾ - ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಅಲಹಾಬಾದ್ (ಪ್ರಯಾಗ), ಅಯೋಧ್ಯಾ, ವಾರಣಾಸೀ (ಕಾಶೀ), ಗಯಾ, ಪುರಿ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ.

**ಪ್ರವಾಸ 2**

**ದಿನಾಂಕ 20-09-2007 ರಿಂದ 21 ದಿನಗಳು**
**ಬದರೀ / ಕಾಶೀ / ಗಯಾ ಯಾತ್ರಾ - ಒಬ್ಬರಿಗೆ ರೂ. 9,000/-**

**ಸ್ಥಳಗಳು** : ಮಥುರಾ, ಬೃಂದಾವನ, ಆಗ್ರಾ, ದೆಹಲಿ, ಹರಿದ್ವಾರ, ಹೃಷೀಕೇಶ, ಬದರೀನಾಥ, ಅಲಹಾಬಾದ್ (ಪ್ರಯಾಗ), ಅಯೋಧ್ಯಾ, ವಾರಣಾಸೀ (ಕಾಶೀ), ಗಯಾ, ಪುರಿ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ.

**ಪ್ರವಾಸ 3**

**ದಿನಾಂಕ 20-09-2007, ರಿಂದ 12 ದಿನಗಳು - ಬದರೀಯಾತ್ರಾ - ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಮಥುರಾ, ಬೃಂದಾವನ, ಆಗ್ರಾ, ದೆಹಲಿ, ಹರಿದ್ವಾರ, ಹೃಷೀಕೇಶ ಮತ್ತು ಬದರೀನಾಥ

**ಪ್ರವಾಸ 4**

**ದಿನಾಂಕ 24-09-2007 ರಿಂದ 6 ದಿನಗಳು - ದೆಹಲಿಯಿಂದ ದೆಹಲಿಗೆ.**
**ಬದರೀಯಾತ್ರಾ - ಒಬ್ಬರಿಗೆ ರೂ. 4,000/-**

**ಸ್ಥಳಗಳು** : ಹರಿದ್ವಾರ, ಹೃಷೀಕೇಶ ಮತ್ತು ಬದರೀನಾಥ

**ಪ್ರವಾಸ 5**

**ದಿನಾಂಕ 02-11-2007 ರಿಂದ 10 ದಿನಗಳು - ದೀಪಾವಳಿ ಸ್ಪೆಷಲ್**
**ಕಾಶೀ / ಗಯಾ ಯಾತ್ರ. ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಅಲಹಾಬಾದ್ (ಪ್ರಯಾಗ), ಅಯೋಧ್ಯಾ, ವಾರಣಾಸೀ (ಕಾಶೀ), ಗಯಾ, ಪುರೀ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ.

**ಪ್ರವಾಸ 6**

**ದಿನಾಂಕ 28-11-2007 ರಿಂದ 15 ದಿನಗಳು - ಪಂಚದ್ವಾರಕ ಯಾತ್ರ - ಒಬ್ಬರಿಗೆ ರೂ. 8,100/-**

ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆಯ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಛಾರ್ಜ್ ಮತ್ತು ಬದರಿ ತಲುಪುವ ಬಸ್ ಛಾರ್ಜು (2 × 2 ಡೀಲಕ್ಸ್) ಸ್ಥಳೀಯ ವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ ಕಾಫಿ / ಟೀ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಕೇದಾರನಾಥಕ್ಕೆ ಹೋಗಬಯಸುವವರು ಹೆಚ್ಚಿನ ಖರ್ಚುಗಳನ್ನು ಪಾವತಿಸಬೇಕು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಆರ್. ಪ್ರಸಾದ್/ಆರ್. ಪ್ರಭಾಕರ್,** ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059 **ದೂ. 044-22390890, ಮೊಬೈಲ್ : 94440-87901** — **ಎ. ಭೀಮರಾವ್,** ನಂ. 10/10, 19ನೇ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 085, **ದೂ. 080-26729528** — **ಡಿ.ಆರ್. ರಾವ್,** 'ಘಟಿಕಾಚಲ', ಪ್ಲಾಟ್ ನಂ. 34, ಶಂಕರ್ ಕಾಲೋನಿ, 1ನೇ ಅಡ್ಡರಸ್ತೆ, ಬಳ್ಳಾರಿ - 583 101, **ದೂ. 08392-274107** — **ಎ. ಮುರಳೀಧರ ರಾವ್,** ಆಲೂರ್ ನಿವಾಸ್, ಅಸುಂಡಿ ಕಾಂಪೌಡ್, ಸ್ಟೇಷನ್ ರಸ್ತೆ, ಹೊಸಪೇಟೆ - 583 201, **ದೂ. 08394-224312**






# ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ

■ ಪಂ. ಆನಂದತೀರ್ಥಾಚಾರ್ಯ
ಆತ್ಮಕೂರು, ಆಂಧ್ರಪ್ರದೇಶ

ಹಿಂದಿನ ಸಂಚಿಕೆಯಿಂದ.......

ಇದೇ ವಿಷಯವನ್ನು ಶ್ರೀಭಾವಿ ಸಮೀರರು ಅಸಮಸಮರಾದ ಶ್ರೀವಾದಿರಾಜತೀರ್ಥ ಪೂಜ್ಯಚರಣರು ಶ್ರೀಮಹಾಭಾರತತಾತ್ಪರ್ಯನಿರ್ಣಯ ಭಾವಪ್ರಕಾಶಿಕೆಯಲ್ಲಿ (೧೦-೪೭) ಹೀಗೆ ಸಾತ್ವಿಕ ಜನೋದ್ಧಾರಾರ್ಥವಾಗಿ ವಿಪುಲೀಕರಿಸಿದರು.

**ಉತ್ತಾರಯಂತೀಮಥೇತ್ಯತ್ರ ಅಥ ಶಬ್ದೇನ ವಸಿಷ್ಠ ಯಾಜ್ಞವಲ್ಕ್ಯಾದೀನಾಂ ಸದಸಿ ವಿವಾಹಹೋಮೇ ಕೃತೇ ಸತಿ ಪಿತ್ರಾವಸುಚಕ್ರವರ್ತಿನಾ, ಧಾರಾಪೂರ್ವಕಂ ದಾನಾಂತರಮಿತಿ ಭಾರತೇ ಪ್ರಸಿದ್ಧಕಥಾಂ ಸ್ಮಾರಯತಿ । ಏವಂ ಚ ಸಮುದ್ರಗಾಂ ಮಾರ್ತಾಂಡಸುತಾಂ ಯಮುನಾಂ ತಾರಯಂತೀಂ, ತಾಂ ಕನ್ಯಾಂ ಅಧಿಜಗಾಮೇತಿ ॥**

**ಯೋಜನಾ ॥ ತಸ್ಮಾತ್ "ಕಾನೀನೋ ವ್ಯಾಸ" ಇತಿ ಯದವಿದುಷಾಂ ವಚನಂ ತದ್ಭಾರತ ಕಥಾ ಪರಿಜ್ಞಾನ ಶೂನ್ಯತ್ವ ನಿಮಿತ್ತಮ್ । ವ್ಯಾಸಸ್ಯ ತು ಜನ್ಮ ಭಾರತೋಕ್ತರೀತ್ಯಾ ಪರಮಸುಶೋಭನಮೇವೇತಿ ಮಹಾಭಾರತ ತಾತ್ಪರ್ಯನಿರ್ಣಯ ಕೃತೋ ಭಾವಃ ।**

(ಶ್ರೀವಾದಿರಾಜೀಯ ಗ್ರಂಥಪ್ರಕಾಶನ ಸಮಿತಿ, ೧೯೫೨ ಪ್ರಕಟಣೆ ಪುಟ ೧೯೨ ಮತ್ತು ೧೯೩ ನೋಡಿ)

ಹೀಗಿರಲಾಗಿ ಸರ್ವೋತ್ತಮರಾದ ಶ್ರೀವೇದವ್ಯಾಸರಿಗೆ ಗರ್ಭವಾಸಾದಿ ಕ್ಲೇಶಗಳೆಲ್ಲಿ? ''ಯಥಾ ನೃಸಿಂಹಾಕೃತಿ ರಾವಿರಾಸೀತ್'' ಎಂಬುವ ನಿರ್ಣಯ ವಚನದಂತೆ ತಿಳಿಯತಕ್ಕದ್ದು. ವಸಿಷ್ಠ, ಯಾಜ್ಞವಲ್ಕ್ಯಾದಿಗಳ ಸಮಕ್ಷಮದಲ್ಲಿ ವಿವಾಹ ಹೋಮ ಪ್ರಕ್ರಿಯಕ್ಕನುಸಾರವಾಗಿ ವಸು ಚಕ್ರವರ್ತಿ ಧಾರಾಪೂರ್ವಕವಾಗಿ ಪರಾಶರರಿಗೆ ಕನ್ಯಾದಾನ ಮಾಡಿದರೆಂಬುದಾಗಿ ಭಾರತಾಖ್ಯಾಯಿಕೆ ಉಂಟೆಂದು ಶ್ರೀಭಾವೀಸಮೀರರು ಪ್ರತಿಪಾದಿಸುತ್ತಾ ''ಕಾನೀನೋ ವ್ಯಾಸಃ'' (ಕನ್ಯಾಯಾ ಅಪತ್ಯಂ ಪುಮಾನ್) ಎಂದು ಅವಿದ್ವಾಂಸರಾದ ಮೂಢರು ಅರ್ಥಾತ್ ಕಾಸಿಕಾವೃತ್ತಿಕಾರನಾದ ಜಯಾದಿತ್ಯನು, ಅವನ ಅನುಯಾಯಿಗಳು ''ಭಾರತಕಥಾ ಪರಿಜ್ಞಾನ ಶೂನ್ಯರು'' ಎಂದು ಆಕ್ಷೇಪಿಸಿದರು. ಶ್ರೀವೇದವ್ಯಾಸರ ಜನ್ಮ, ವಿವಾಹಾನಂತರವೇ ಜರುಗಿದೆ ಎಂದೂ, ಅದು ಪರಮ ಶೋಭನವೆಂದು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ ಕಾರರಾದ ಶ್ರೀಮದಾಚಾರ್ಯರ ಭಾವವು 'ಇದೇ' ಎಂಬುದಾಗಿ ಶ್ರೀಭಾವೀಸಮೀರರು ಸ್ಪಷ್ಟಗೊಳಿಸಿದರು.

ಆದರೆ ಕೆಲವು ಆಧುನಿಕರು ಭಾವಪ್ರಕಾಶಿಕಾ ಗ್ರಂಥೋಕ್ತ ಈ ಸಂದರ್ಭವನ್ನೂ ಪ್ರಕ್ಷಿಪ್ತವೆನ್ನುತ್ತಾರೆ. 'ಸತ್ಯವತೀ ಪರಾಶರರ ವಿವಾಹವಾಗಿಲ್ಲ' ಎಂದೇ ಶ್ರೀಮನ್ಮಹಾಭಾರತೋಕ್ತಿ ಮತ್ತು ಸತ್ಯವತಿಯ ಕನ್ಯಾವಸ್ಥೆಯಲ್ಲಿಯೇ ಶ್ರೀವೇದವ್ಯಾಸರು ಜನಿಸಿದರು ಎಂದು ಪ್ರತಿವಾದಿಸುತ್ತಿರುವರು. ಆದರೆ ಈ ವಾದವು ಸರಿಯಲ್ಲ. ಇದು ದುರ್ವಾದ; ಸಚ್ಛಾಸ್ತ್ರ ವಿರುದ್ಧ.

**"ಕಾನಿನೋ ನಹಿ ವೇದವಾದ ವಿದಿತೋ ವ್ಯಾಸಃ ಕನಿನೋ ಹರಿಃ ಏವಂ ಮಧ್ವ-ಗುರೋರ್ಮತಂ ಶ್ರುತಿನುತಂ ಕೋ ವೇದ? ಭೋ! ತ್ವಾಮೃತೇ ॥ ಶುಕ್ಲಂ ಶ್ರೀಋಜು ಮಧ್ಯಗಂ ಹರಿಗುರೋರೇಕಾಂತ ಭಕ್ತಂ ಸದಾ ವಂದೇ ಭಾವಿಸಮೀರ! ಕಲ್ಪಪದಪ ಶ್ರೀವಾದಿರಾಜಪ್ರಭೋ!!"** ಎಂದು ಭಾವೀಸಮೀರರನ್ನು ಸ್ತೋತ್ರಗೈದು ಭಕ್ತ್ಯಾ ಸಾಷ್ಟಾಂಗ-ವೆರಗಿ ಸಾತ್ವಿಕರೆಲ್ಲರೂ ಧನ್ಯರಾಗುವುದು.

ಇಷ್ಟೇ ಅಲ್ಲದೆ, ಶ್ರೀವೇದವ್ಯಾಸರನ್ನು "ತಥಾಹಿ-ಆಪಾಂತರ ತಮಾನಾಮ ವೇದಾಚಾರ್ಯಃ ಪುರಾಣರ್ಷಿರ್ವಿಷ್ಣು ನಿಯೋಗಾತ್ಕಲಿ ದ್ವಾಪರಯೋಃ ಸಂಧೌ ಕೃಷ್ಣದ್ವೈಪಾಯನಃ ಸಂಬಭೂವೇತಿ ಸ್ಮರಂತಿ ।" (ಬ್ರಹ್ಮಸೂತ್ರ, ಶಾಂಕರಭಾಷ್ಯ ೩-೩-೩೨ ನೋಡಿ) ಶ್ರೀಕೃಷ್ಣದ್ವೈಪಾಯನರು 'ಅಪಾಂತರ ತಮಸ್' ಎನ್ನುವ ಚೇತನನ ಅವತಾರವೆಂದು ಶಂಕರಾಚಾರ್ಯರ ಅಭಿಪ್ರಾಯ. ಇದೂ ಕೂಡ ಅಸಾತ್ವಿಕ ವ್ಯವಹಾರ ಜನಿತ ಜ್ಞಾನವೇ; ಅರ್ಥಾತ್ ತಾಮಸವು. **ಶ್ರೀವೇದವ್ಯಾಸರ ಬಗ್ಗೆ ಉಂಟಾದ ಈ ಜ್ಞಾನವು ಅಂಧಃತಮಸ್ಸಿಗೆ ಸುಗಮವಾದ ಹಾದಿಯಾಗುವುದು.**

ಕೆಲವು ಪಾಶ್ಚಾತ್ಯರು, ಉದಾ: ರೋತ್, ಲೇಬರ್, ಮ್ಯಾಕ್ಸ್ ಮುಲ್ಲರ್, ಮ್ಯಾಕ್ ಡೊನಾಲ್ಡ್, ಕೇಥ್, ಹೋಪ್‌ಕಿನ್ಸ್, ಮೊದಲಾದವರು ಶ್ರೀವ್ಯಾಸರನ್ನು ಮಿಥಿಕಲ್ (Mythical) ಎಂಬುದಾಗಿ ಚಿತ್ರಿಸುತ್ತ, "Vaishampayana and Vyasa as mentioned, as early as the Taithiriya Aranyaka, but not as authors or editors of the epic which is now their chief claim to recognition [vide - Cambridge History of India (HOPKINS) Vol-1, Page-252]" ಹೀಗೆ ನುಡಿದಿರುವರು. ಇದು ಅತ್ಯಂತ ಹೇಯವಾದದ್ದು. ಈ ಬಗ್ಗೆ ಮಾನ್ಯ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್‌ರವರು ಪೂರ್ವೋದಾಹೃತ Western Scholarship ಸುಳಿಗೆ ಸಿಕ್ಕು ಅವರ "The Bhagavad Gita by S. Radhakrishnan" (Introduction Page 4) ಎನ್ನುವ ಕೃತಿಯಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ -

"We do not know the name of the author of the Gita. Almost all the books belonging to the early literature of India



are anonymous. The authorship of the Gita is attributed to Vyasa, the legendry compiler of Mahabharatha."

**ಈ ಮಾತುಗಳು ಕೇವಲ ಪಾಶ್ಚಾತ್ಯರನ್ನು ತೃಪ್ತಿಪಡಿಸುವುದಕ್ಕಾಗಿ ಆಡಿದವೇ ಹೊರತು ಯಥಾರ್ಥವಲ್ಲ. ಶ್ರೀರಾಧಾಕೃಷ್ಣನ್‌ರವರು ಪಂಡಿತರು; ನಿರ್ಮತ್ಸರರು. ಅವರಿಗೆ ಯಥಾರ್ಥಾವಗಾಹನ ಉಂಟಾದದ್ದೇ ಆಗಿದ್ದರೆ, ಅವರ ಅಭಿಪ್ರಾಯ-ವನ್ನು ಬದಲಾಯಿಸಿಕೊಳ್ಳುತ್ತಿದ್ದರು.** ಅವರ ಸಂಪರ್ಕ ನನಗೆ ಇರುವ ಪ್ರಯುಕ್ತ ಅವರ ವಿಚಾರಸರಣಿಯ ಬಗ್ಗೆ ಇದು ನನ್ನ ಅನಿಸಿಕೆ.

ಇಂತಹ ಮಹಿಮೋಪೇತ ದಿವ್ಯತರವಾದ ಶ್ರೀವೇದವ್ಯಾಸರ ವಿಷಯದಲ್ಲಿ ಪ್ರಸಕ್ತ-ವಾದ ವಿಷಯವನ್ನು ಋಗ್ವೇದದ "ಭಿನತ್ ಕನೀನ ಓದನಂ" ಇತ್ಯಾದಿ ಮಂತ್ರಗಳು; ಗೋಪಥ ಬ್ರಾಹ್ಮಣದಲ್ಲಿ (೧-೨೯) "ಏತಸ್ಮಾದ್ ವ್ಯಾಸಃ ಪುರೋವಾಚ", ತೈತ್ತಿರೀಯಾ-ರಣ್ಯದಲ್ಲಿ (೧೯-೩೫) "ಸಹೋವಾಚ ವ್ಯಾಸಃ ಸಪರಾಶರ್ಯಃ", ಶತಪಥ ಬ್ರಾಹ್ಮಣ-ದಲ್ಲಿ (೧೪-೫-೫-೨೧) "ಪಾರಾಶರ್ಯೋ ಚಾತೂಕರ್ಣ್ಯಾತ್". ಹೀಗೆ ಲೌಕಿಕ, ಪಾರಮಾರ್ಥಿಕ ದೃಷ್ಟಿಯಿಂದ ನೋಡಲು 'ಸಾಮವಿಧಾನ ಬ್ರಾಹ್ಮಣ' ಮತ್ತು ಭಾರತ ಭಾಗವತಾದಿ ಸಚ್ಛಾಸ್ತ್ರಗಳಲ್ಲಿ ಪ್ರಮಾಣ ಪ್ರಮಿತವಾಗಿ ಉಪವರ್ಣಿತಗಳಾಗಿವೆ. "ಸರ್ವವೇದ ವಿದಾಂ ಶ್ರೇಷ್ಠೋ ವ್ಯಾಸಃ ಸತ್ಯವತೀ ಸುತಃ" ಎಂಬುದಾಗಿ ಮಹಾಭಾರತ ಶಾಂತಿ-ಪರ್ವದಲ್ಲಿ (೨-೧) ವರ್ಣಿತವಾಗಿದೆ. "ಭಗವಾನ್ ನಾರಾಯಣೋ ವ್ಯಾಸತ್ವೇನಾ-ವತತಾರ" ಎಂಬುದಾಗಿ **ಸಾಕ್ಷಾತ್ ಕಮಲಜಾಪತಿ ಶ್ರೀಮನ್ನಾರಾಯಣನೇ, ಪರಮ ಸುಂದರನಾದ ಜ್ಞಾನರಶ್ಮಿಯಾದ ಶ್ರೀಕೃಷ್ಣದ್ವೈಪಾಯನರು ಎಂಬುವುದೇ ಸಿದ್ಧಾಂತವು.**

❑❑


### ವಿಳಾಸ ಬದಲಾವಣೆಗಾಗಿ ನೂತನ ಎಸ್.ಎಂ.ಎಸ್.

**ಈ ಕೆಳಕಂಡ ಸಂಖ್ಯೆಯು ಮಂತ್ರಾಲಯದ ಮಾಸಪತ್ರಿಕೆಯ ವಿತರಣಾ ವಿಭಾಗದ್ದಾಗಿದ್ದು, ವಿಳಾಸ ಬದಲಾವಣೆಗಾಗಿ, ಸಂಚಿಕೆ ತಲುಪದಿದ್ದಲ್ಲಿ ಮತ್ತು ಸೇವೆಗಳ ಬಗ್ಗೆ, ವಸತಿ ವ್ಯವಸ್ಥೆಗಳ ಬಗ್ಗೆ ಈ ಸಂಖ್ಯೆಗೆ ಎಸ್.ಎಂ.ಎಸ್. ಗಳನ್ನು ಕಳುಹಿಸಿದಲ್ಲಿ ಶೀಘ್ರವಾಗಿ ನಿಮ್ಮ ಹೊಸ ವಿಳಾಸಕ್ಕೆ ಮಾಸಪತ್ರಿಕೆಗಳು ತಲುಪುವುವು ಮತ್ತು ತಮಗೆ ಬೇಕಾದ ಮಾಹಿತಿಗಳು ಸಿಗುವುವು. ಸದಸ್ಯರ, ಭಕ್ತರ ಉಪಯೋಗಕ್ಕಾಗಿ ಈ ನೂತನ ವ್ಯವಸ್ಥೆ. ಇದನ್ನು ಸದುಪಯೋಗಿಸಿಕೊಳ್ಳಿ.**

**S.K. PRANESH — 099857-03033**

ಲೇಖನಾಂಕ

# ಕಲಿಯುಗದ ಸಂತಾನ

■ ಡಾ. ಪಾಂಡುರಂಗ ಜೋರಾಪುರ

ಜನಸೇವಾಸಮಿತಿ ಆಶ್ರಮ, ಪೋಸ್ಟ್ : ನೀರಲಕೇರಿ, ಜಿಲ್ಲಾ : ಬಾಗಲಕೋಟೆ - ೫೮೭ ೧೧೧

ಹೆತ್ತು - ಹೊತ್ತು, ತಮ್ಮ ಕಷ್ಟಗಳನ್ನು ಕಡೆಗಣಿಸಿ, ಪ್ರೀತಿಯಿಂದ ಬೆಳೆಸಿದ, ದೊಡ್ಡವರನ್ನಾಗಿ ಮಾಡಿದ ತಾಯಿ-ತಂದೆಯರನ್ನು ತಿರಸ್ಕರಿಸುವ, ಅಷ್ಟೇ ಏಕೆ, ತ್ರಿಕರಣಪೂರ್ವಕ (ಕಾಯಾ, ವಾಚಾ, ಮನಸಾ!) ಹಿಂಸಿಸುವ ಮಕ್ಕಳು ಈಗಷ್ಟೆ ಹೆಚ್ಚಿದ್ದಾರೆಯೇ? ಹಿಂದೆಯೂ ಇಂಥಹಾ ಮಕ್ಕಳು ಇದ್ದಿರಬಹುದು. (ಪ್ರಮಾಣ ಎಷ್ಟೇ ಇದ್ದರೂ) ಎಂಬುದು ದಾಸರ ಕೃತಿಗಳಿಂದ ಕಂಡುಬರುತ್ತದೆ. ಅಷ್ಟೇ ಏಕೆ, ಪುರಾಣಕಾಲದಲ್ಲೂ ಇದ್ದಿರಬಹುದು ಎಂಬುದಕ್ಕೆ ಗರುಡಪುರಾಣದ ಈ ವಾಣಿಗಳು ಸೂಚಿಸುತ್ತವೆ : **''ಆಸ್ತೇಃಪತ್ಯೋಪನ್ಯಸ್ತಂ ಗೃಹಪಾಲ ಇವಾಹರನ್'' (೧.೨೨.)** ವೃದ್ಧಾಪ್ಯ ಬಂದಾಗ ತಿರಸ್ಕಾರದಿಂದ ಪುತ್ರಾದಿಗಳು ಕೊಟ್ಟ ಆಹಾರವನ್ನು ಮನೆ ಮುಂದೆ ಬಿದ್ದಿರುವ ನಾಯಿಯಂತೆ ತಿನ್ನುತ್ತಿರುತ್ತಾನೆ! ಇನ್ನೊಂದು ಕಡೆ ''ತಾಯಿ-ತಂದೆಯರನ್ನು, ಗುರುಗಳನ್ನು ಅವಮಾನಿಸುವವರು ವೈತರಣೀ ಸಮುದ್ರದಲ್ಲಿ ಬೀಳುತ್ತಾರೆ'' ಎಂದು ಎಚ್ಚರಿಸುತ್ತದೆ! **''ಮಾತರಂ ಯೇಽವಮನ್ಯಂತೇ ಪಿತರಂ ಗುರುಮೇವ ಚ । ಆಚಾರ್ಯಂ ಚಾಪಿ ಪೂಜ್ಯಂ ಚ ತಸ್ಯಾಂ ವಜ್ಯಂತಿ ತೇ ನರಾಃ''** (೪-೧೪)

ಕಲಿಯುಗದ 'ಮಹಿಮೆ'ಯನ್ನು ವರ್ಣಿಸುತ್ತ ಪುರಂದರದಾಸರು ಹೀಗೆ ಹೇಳುತ್ತಾರೆ : ''ಗುರುಹಿರಿಯರ ದೂಷಿಸಲು ಎಣಿಸುವರು, ಪೊರೆವ ತಾಯ್ತಂದೆಗಳ ಮಾತುಗಳ ಮನ್ನಿಸದೆ ತರುಣಿಯರ ನುಡಿ ಕೇಳಲಿಚ್ಛಿಸುತ್ತಿಹರು'', ಕೆಲವು 'ಸುಪುತ್ರರು' ಇನ್ನೂ ಮುಂದೆ ಹೋಗುತ್ತಾರೆ. ''ಹೆಂಡಿರಲ್ಲಿಯ ಭಕ್ತಿ ಹಿರಿಯರಲ್ಲಿಲ್ಲ. ಹೆಂಡತಿಗೆ ಹಿರಿತನ ಹಿರಿಯರಿಗೆ ಕಿರಿತನ! ಹೆಂಡತಿಗೆ ಮಾನ, ಹಿರಿಯರಿಗಪಮಾನ. ಹೆಂಡರಿಗೆ ಮೃದುಮಾತು, ಹಿರಿಯರಿಗೆ ದುರ್ವಾಕ್ಕು! ಹೆಂಡಿರೇ ಬೇಕು, ಹಿರಿಯರ ಸಂಗ ಸಾಕು. ಹೆಂಡಿರೆಂದರೆ ಹಿಗ್ಗು, ಹಿರಿಯರೆಂದರೆ ಕುಗ್ಗು. ಕಂಡು ನಗುವನು ನಮ್ಮ ಪುರಂದರ ವಿಠಲ''. ಕೆಲವರ 'ಸನ್ಮಾನ' ಇಷ್ಟಕ್ಕೆ ನಿಲ್ಲುವುದಿಲ್ಲೆಂದು ಹೇಳುತ್ತಾರೆ ದಾಸರು. ''ಜನರ ನಡತೆಯ ಕೇಳಿರಯ್ಯ, ಇಂಥ ಜನರ ನೋಡಿ ನೀವು ಏನೆಂಬಿರಯ್ಯ? ತಾಯಿಗನ್ನವನಿಕ್ಕರಯ್ಯ, ಬಲು ಬಾಯಮಾತಿಗೆ ಮರುಳಾಗುವರಯ್ಯ, ನ್ಯಾಯವೆಂಬುದು ಇಲ್ಲವಯ್ಯ''.



ಸಂಸಾರ 'ಸುಖ'ಕ್ಕೆ ಮೋಸ ಹೋಗಬಾರದೆಂದು ವಿಜಯದಾಸರು ಹೀಗೆ ಎಚ್ಚರಿಸುತ್ತಾರೆ : ''ನಂಬಿ ನೆಚ್ಚದಿರಿ ನರಲೋಕ ಸುಖವೆಂಬ.....ಮರೆ ಮೋಸ-ಗೊಳಿಸುವ ಸತಿಸುತರೆಂಬೋದೆ ಕೇವಲ ಯಮಕಾಟ! ಪರತತ್ವವಾದ ಶ್ರೀಹರಿಯ ತಿಳಿವುದೆ ವೈಕುಂಠಕೆ ಓಟ''. ಜನ್ನಾಥದಾಸರೂ ಹೀಗೆ ಶರಣಾಗುತ್ತಾರೆ. ''ನಿನ್ನ ಸಂಕಲ್ಪಾನುಸಾರ ಮಾಡೋ ಎನ್ನ ಸಾಕುವ ಧೊರೆಯೆ, ಮಾನ್ಯ ಮಾನದ ನೀನು. ಪುತ್ರ ಮಿತ್ರಾದ್ಯರಿಂದ ಬೈಸು, ಪೂಜೆಯ ನಡೆಸು, ಕರ್ತೃ ನೀ ಜಗಕೆ ಸರ್ವತ್ರವ್ಯಾಪಕನೆ'' ಕನಕದಾಸರು ಕಲಿಕಾಲ ಕಂಡು ಕಳವಳಿಸುತ್ತಾರೆ. ''ಕಲೆ ಹೆಜ್ಜೆ ಬಂದಿತಲ್ಲಾ ರಂಗಯ್ಯ, ಕಾಯೆನ್ನ ಸಿರಿಯನಲ್ಲ.... ಅತ್ತೆಯ ಸೊಸೆ ಬೈದಳು, ಪುತ್ರರು ತಮ್ಮ ಹೆತ್ತ ತಾಯಿಯ ಬಿಡುವರು....''

ಹಿರಿಯ ನಾಗರಿಕರ ಗೋಳು ಕಂಡು ಪುರಂದರದಾಸರು ಅನುಕಂಪ ತೋರಿಸುತ್ತಾರೆ : ''ಒಂದಲ್ಲ ಎರಡಲ್ಲ ನೊಂದ ಜೀವಕೆ ದುಃಖ. ವಶವಲ್ಲದ ದುಃಖ, ವಾರ್ಧಕ್ಯದ ದುಃಖ, ಸತಿ-ಸುತ-ಮಿತ್ರರು ಕಾಡುವ ದುಃಖ....ವಾದಿಸುವ ಸತಿ-ಸುತರು ಇದ್ದು ಫಲವೇನು?'' ಏಕೆಂದರೆ, ಪುರಂದರವಿಠಲನ ಧ್ಯಾನವುಳ್ಳ ಹರಿದಾಸರಿಗೆ ಯಾರು ಒಲಿದರೇನು? ನಮಗಿನ್ನಾರು ಮುನಿದರೇನು? ಮಡದಿ, ಮಕ್ಕಳು, ಮನೆಯ ನೆಂಟರು ಮುನಿಸುಗುಟ್ಟಿದರೇನು? ಇಂಥವರ ''ಧರ್ಮ ಕಾರ್ಯ'' ಎಲ್ಲ ಬೂಟಾಟಿಕೆ ಎಂದು ಬೆರೆಸುತ್ತಾರೆ ದಾಸರು. ''ಹೆತ್ತ ತಾಯಿ-ತಂದೆಗಳ ಚಿತ್ತವ ನೋಯಿಸಿ, ನಿತ್ಯ ದಾನವ ಮಾಡಿ ಫಲವೇನು? ಚಿನ್ನ ದಾನವ ಮಾಡಿದರೆ ಫಲವೇನು?'' ಅಂತೆಯೇ ಕನಕದಾಸರೂ ಕೇಳುತ್ತಾರೆ. ''ಮಾತು ಕೇಳದೆ ಮರೆತು ನಡೆವ ಮಕ್ಕಳ್ಯಾತಕೆ?''

ಇಂಥ ಮಕ್ಕಳನ್ನು ನೋಡಿ ಪುರಂದರದಾಸರು ಮೂದಲಿಸುತ್ತಾರೆ. ''ಮಲವ ತೊಳೆಯಬಲ್ಲರಲ್ಲದೆ ಮನವ ತೊಳೆಯಬಲ್ಲರೆ? ತಂದೆ-ತಾಯಿ ತಿರಿದು ತಿನ್ನಲು ಒಂದು ದಿನವು ಕೇಳಲಿಲ್ಲ. ಮಂದಗಮನೆಯೊಡನೆ ಆನಂದದಿಂದಲಿರುವನು. **ತಂದೆ ಸತ್ತ ಮೇಲೆ ನೂರು ಮಂದಿ ವಿಪ್ರರಿಗುಣಿಸಿ ತಮ್ಮ ತಂದೆ ತೃಪ್ತನಾದರೆಂಬರು ಮಂದಮತಿಯ ಜನಗಳು' ಎಂದು ಅವರು ಎಚ್ಚರಿಕೆಯನ್ನೂ ಕೊಡುತ್ತಾರೆ. ಇಂಥ ಮಕ್ಕಳಿಗೆ** ''ಯಮ ತನ್ನ ಪುರದಿ ಸಾರಿದನು, ಗುರುನಾದಕರ ಹಿರಿಯರ ದೂಷಿಸುವವರ, ಮಾತಾ-ಪಿತರ ದುರ್ಮತಿಯಿಂದ ಬಯ್ಯುವ ಪಾತಕರ ಪರದ್ರೋಹಿ-ಗಳ ಘಾತಿಸಿ ಎಳೆತಂದು ಕೊಲ್ಲಿರೋ'' ಎಂದು! ಕನಕದಾಸರೂ ಸುಮ್ಮನೆ ಕೂಡುವುದಿಲ್ಲ : ''ತಾಯಿ-ತಂದೆಯರ ನೋಯಿಸಿದವನಿಗೆ ಮಾಯದ ಮರಣವು ತಪ್ಪೀತೆ?'' ಎಂದು ಕೇಳುತ್ತಾರೆ.

ಗರುಡಪುರಾಣವೂ ಇಂಥಹಾ ಮಕ್ಕಳಿಗೆ ಮುನ್ನೆಚ್ಚರಿಕೆ ಕೊಡುತ್ತದೆ : ತಾಯಿ-ತಂದೆಯರ, ಬಂಧುಗಳ, ಸೋದರಿಯರ, ಗುರುಗಳ ದ್ವೇಷಮಾಡುವವರು ಸಾವಿರಾರು ಜನ್ಮಪರ್ಯಂತ ಗರ್ಭದಲ್ಲಿಯೇ ಮರಣ ಹೊಂದುತ್ತಾರೆ. ''ಮಾತಾ-ಪಿತೃ-ಗುರುದ್ವೇಷಿ, ಭಗಿನಿ-ಭ್ರಾತೃವೈರಕೃತ್ ಗರ್ಭೇ ಯೋನೌ ವಿನಸಃ ಸ್ಯಾದ್ಯಾವದ್ಯೋನಿಸಹಸ್ರಶಃ'' (೫-೨೫)

ಇದಕ್ಕೆಲ್ಲ ಪರಿಹಾರವೆಂಬಂತೆ ಪುರಂದರದಾಸರು ಉಪದೇಶಿಸುತ್ತಾರೆ : ''ಸತಿಗೆ ಸ್ವಾತಂತ್ರ್ಯವ ಕೊಡದಿರು, ನಿನ್ನ ಮತಿಗೆಟ್ಟು ಬಾಯಿ ಬಿಡದಿರಣ್ಣ, ಪತಿಗೆ ಬಣ್ಣದ ಮಾತನಾಡ್ಯಾಳೊ. ಹಡೆದ ತಂದೆ-ತಾಯಿ ತೊರೆಸ್ಯಾಳೊ, ತನ್ನ ಕಡೆಗೆ ಬಾಯೆಂದು ಕರೆಸ್ಯಾಳೋ!'' ಎಂದು.

❑❑

## ಶ್ರೀಪದ್ಮನಾಭತೀರ್ಥರಿಗೆ ರಜತ ಕವಚ ನಿರ್ಮಾಣ

ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನವಾದ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಪೂರ್ವಿಕರಾದ ಶ್ರೀಪದ್ಮನಾಭತೀರ್ಥರ ಮೂಲ ಬೃಂದಾವನಕ್ಕೆ ರಜತ ಕವಚ ನಿರ್ಮಾಣ ಮಾಡುವುದಾಗಿ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಗಂಗಾವತಿಯಲ್ಲಿ ತಿಳಿಸಿದರು. ಭಕ್ತರೊಬ್ಬರು ನೆರವೇರಿಸಿದ ರಜತ ತುಲಾಭಾರವನ್ನು ಸ್ವೀಕರಿಸಿ ಮಾತನಾಡಿದ ಶ್ರೀಪಾದರು ಈ ರಜತ ತುಲಾಭಾರದಲ್ಲಿ ಬಂದ ಬೆಳ್ಳಿಯಿಂದ ಈ ಕಾರ್ಯವನ್ನು ನೆರವೇರಿಸುವುದಾಗಿ ಶ್ರೀಪಾದಂಗಳವರು ತಮ್ಮ ಆಶೀರ್ವಚನದಲ್ಲಿ ನುಡಿದರು. ಉತ್ತರಾಧಿಕಾರಿ-ಗಳಾದ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ನೆರೆದ ಭಕ್ತರನ್ನು ಆಶೀರ್ವದಿಸಿದರು.

## ನಮ್ಮ ಇ-ಮೇಲ್

ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯು ದಿನದಿಂದ ದಿನಕ್ಕೆ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವುದಕ್ಕೆ ಕಾರಣೀಭೂತರಾದವರು ಓದುಗಪ್ರಭುಗಳು. ಪತ್ರಿಕೆಯು ಎಸ್.ಎಂ.ಎಸ್. ಗಳ ಮುಖಾತರ ಓದುಗರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದೆ. ಈಗ ಮತ್ತೊಂದು ಮಾರ್ಗವನ್ನು ಪತ್ರಿಕೆಯು ಕಂಡುಕೊಂಡಿದೆ. ಈ ಮಾರ್ಗವೇ ಇ-ಮೇಲ್. ಇನ್ನು ಮುಂದೆ ಕೆಳಗಿನ ಇ-ಮೇಲ್ ಮೂಲಕವಾಗಿಯೂ ನಮ್ಮನ್ನು ನೀವು ಸಂಧಿಸಬಹುದಲ್ಲವೆ!

***www.gsmagkan@yahoo.co.in***



## ಭಗವದ್ಭಕ್ತರ ಗಮನಕ್ಕೆ

ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ ಸಹಿತವಾದ

**ಶ್ರೀಜಗನ್ನಾಥದಾಸರಾಯರ ಶ್ರೀಮದ್ಧರಿಕಥಾಮೃತಸಾರ**

1907 ನೇ ಇಸವಿಯ ತೆಲುಗು ಮುದ್ರಿತ ಪ್ರತಿಯನ್ನು ಆಧರಿಸಿ
ಕನ್ನಡದಲ್ಲಿ ಪ್ರಥಮ ಬಾರಿಗೆ ಮುದ್ರಿತವಾಗುತ್ತಿದೆ.

ಇದುವರೆವಿಗೂ
ಶ್ರೀಸಂಕರ್ಷಣ ಒಡೆಯರ ಪೂರ್ವಾರಾಧನೆ (27-11-2006) ರಂದು
ಪ್ರಥಮ ಸಂಪುಟವು (ಸಂಧಿ 1-9 ರವರೆಗೆ)
ರಾಯಲ್ ಸೈಜ್ ಕ್ಯಾಲಿಕೋ ಬೈಂಡ್ 436 ಪುಟಗಳು, ಬೆಲೆ ರೂ. 250/-.
ಹಾಗೂ
ಶ್ರೀವಿದ್ಯಾಮಾನ್ಯತೀರ್ಥರ ಪೂರ್ವಾರಾಧನೆ (27-04-2007) ರಂದು
ದ್ವಿತೀಯ ಸಂಪುಟ (ಸಂಧಿ 10-21 ರವರೆಗೆ)
ರಾಯಲ್ ಸೈಜ್ ಕ್ಯಾಲಿಕೋ ಬೈಂಡ್ 534 ಪುಟಗಳು, ಬೆಲೆ ರೂ. 350/-.

ಒಟ್ಟು ಎರಡು ಸಂಪುಟಗಳು ಶ್ರೀಪೇಜಾವರ ಶ್ರೀಪಾದಂಗಳವರಿಂದ ಬಿಡುಗಡೆಯಾಗಿವೆ.
ಮೂರನೇ ಸಂಪುಟದ ಮುದ್ರಣಕಾರ್ಯವು ಆರಂಭವಾಗುವುದರಲ್ಲಿದೆ.

ಈ ಜ್ಞಾನಕಾರ್ಯಕ್ಕೆ ರೂ. 5,000/- ನೀಡುವವರನ್ನು ಪೋಷಕರೆಂದು,
ಅದಕ್ಕಿಂತ ಹೆಚ್ಚು ನೀಡುವವರನ್ನು ದಾನಿಗಳೆಂದು ಹಾಗೂ
ರೂ. 750/- (ಪ್ರಕಟಣಾಪೂರ್ವ ಬೆಲೆ 750/- ನ್ನು 30-09-2007 ರೊಳಗೆ)
ನೀಡುವವರನ್ನು ಸದಸ್ಯರೆಂದು ಪರಿಗಣಿಸಲಾಗುತ್ತದೆ.

ಪುಸ್ತಕವನ್ನು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಬೆಂಗಳೂರಿನವರು ಚೆಕ್ ಅಥವಾ ಡಿ.ಡಿ. ಕಳುಹಿಸಬಹುದು.
ಹೊರ ಊರಿನವರು ಡಿ.ಡಿ. ಮಾತ್ರ ಕಳುಹಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

**ಶ್ರೀಜಗನ್ನಾಥವಿಠಲ ಪ್ರಕಾಶನ**

**ಶ್ರೀರಮೇಶ್. ಪಿ. ಯಲಮೇಲಿ,** ಪ್ರಕಾಶಕರು
ನಂ. 119, 6ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಸಾರ್ವಭೌಮನಗರ
ಚಿಕ್ಕಕಲ್ಲಸಂದ್ರ, ಬೆಂಗಳೂರು - 560 061
ದೂರವಾಣಿ : 080-26393552, ಮೊಬೈಲ್ : 9448190414

ಒಟ್ಟಿಗೆ ಹಣ ನೀಡಿ ಗ್ರಂಥವನ್ನು ಪಡೆಯಲಾಗದವರಿಗಾಗಿ
ವಿಶೇಷ ಯೋಜನೆಯೊಂದಿದ್ದು, ದೂರವಾಣಿಯ
ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಲೇಖನಾಂಕ

# ಮುಕ್ತಿಃ ನೈಜಸುಖಾನುಭೂತಿಃ

■ ಶ್ರೀ ವರದರಾಜ ಗುತ್ತಲ

ನಂ. ೩/೧, ೩ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಗವಿಪುರಂ ಲೇಔಟ್, ಬೆಂಗಳೂರು-೧೯

ಸಕಲ ಸಾತ್ವಿಕ ಚೇತನರಿಂದ ಪಡೆಯಬಹುದಾದದ್ದು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎನ್ನುವ ನಾಲ್ಕು ವಿಧ ಪುರುಷಾರ್ಥಗಳು. ಆ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವು ಶ್ರೇಷ್ಠವಾದುದು. ಆದುದರಿಂದಲೇ ಶ್ರೀಮದಾಚಾರ್ಯರು **"ಮೋಕ್ಷೋ ಹಿ ಸರ್ವ ಪುರುಷಾರ್ಥೋತ್ತಮಃ"** ಎಂದು (ವಿಷ್ಣುತತ್ವನಿರ್ಣಯ) ಹೇಳಿರುತ್ತಾರೆ. ಮೋಕ್ಷದ ಪರ್ಯಾಯ ಶಬ್ದವೇ ಮುಕ್ತಿ. ಸ್ವರೂಪ ಸುಖದ ಆವಿರ್ಭಾವವೇ ಮೋಕ್ಷ. ಜೀವರು ಉಚ್ಚ, ಮಧ್ಯಮ, ಅಧಮ ಎಂದು ಮೂರು ವಿಧವಾಗಿದ್ದಾರೆ. ಇವರಲ್ಲಿ ಉಚ್ಚರು ಸಾತ್ವಿಕರೆಂದು, ಮಧ್ಯಮಜೀವರು ರಾಜಸರೆಂದು, ಅಧಮಜೀವರು ತಾಮಸರೆಂದು ಶಾಸ್ತ್ರವು ತಿಳಿಸಿಕೊಡುತ್ತದೆ. ಪ್ರಸ್ತುತ ಸಾತ್ವಿಕಜೀವರು ಮಾತ್ರ ಮುಕ್ತಿಗೆ ಅರ್ಹರು, ಅವರೇ ನಿತ್ಯಸುಖರೂಪವಾದ ಮೋಕ್ಷಕ್ಕೆ ಯೋಗ್ಯರು ಎನ್ನುವುದನ್ನು ಇಲ್ಲಿ ವಿಚಾರಮಾಡಲಾಗುತ್ತದೆ.

ಭಗವಂತನು ೮೪ ಲಕ್ಷ ಯೋನಿಗಳನ್ನು ಸೃಷ್ಟಿಸಿದ್ದಾನೆ. ಪ್ರತಿಯೊಂದು ಯೋನಿಗೂ ಆಹಾರವನ್ನು ಸೃಷ್ಟಿಮಾಡಿದ್ದಾನೆ. ಅವುಗಳ ಇರುವಿಕೆಗೆ ಹಾಗೂ ಪ್ರಯತ್ನಾನುಸಾರವಾಗಿ ಭಗವಂತನು ಆಹಾರವನ್ನು ಒದಗಿಸಿಕೊಡುತ್ತಾನೆ. ಅವುಗಳ ಯೋಗ್ಯತೆಗೆ ಅನುಗುಣವಾಗಿ ಸುಖವನ್ನು ಕೊಡುತ್ತಾನೆ. ಸುಖವು ಕೂಡಾ ಲೌಕಿಕ ಸುಖ ಹಾಗೂ ಪಾರಮಾರ್ಥಿಕ ಸುಖವೆಂದು ಎರಡು ಬಗೆಯಾಗಿದೆ. ಪಂಚಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ - ಇವು ಪ್ರತಿಯೊಬ್ಬ ಚೇತನನಿಗೆ ಬಾಹೇಂದ್ರಿಯರೂಪವಾಗಿ ವಿಷಯಗಳಿಂದ ಅನಿತ್ಯ ಸುಖವು ಉಂಟಾದರೆ, ಜೀವರ ಸ್ವರೂಪಕ್ಕೆ ಇರುವ ಅವೇ ಜ್ಞಾನೇಂದ್ರಿಯಗಳು ನಿತ್ಯಸುಖವನ್ನು ಕೊಡುತ್ತವೆ. ಬಾಹ್ಯೇಂದ್ರಿಯಗಳಿಂದ ಉಂಟಾದ ಸುಖವು ಲೌಕಿಕ ಸುಖವಾದರೆ, ಸ್ವರೂಪೇಂದ್ರಿಯಗಳಿಂದ ಉಂಟಾದ ಸುಖವು ಪಾರಮಾರ್ಥಿಕ ಸುಖವೆನಿಸುತ್ತದೆ. ಅದೇ ಮೋಕ್ಷಸುಖವೂ ಹೌದು. ಲೌಕಿಕ ವಸ್ತುಗಳಿಂದ ಬರುವ ಸುಖವು ಅನಿತ್ಯ ಹಾಗೂ ತಾತ್ಕಾಲಿಕ. ಪ್ರತಿಯೊಬ್ಬ ಸಾತ್ವಿಕ ಚೇತನನಲ್ಲಿ ಹುದುಗಿರುವ ಸುಖ ನಿತ್ಯ ಹಾಗೂ ಶಾಶ್ವತವು.



ಇದನ್ನು ಪಡೆಯಬೇಕಾದರೆ ಭಗವಂತನ ಅಪರೋಕ್ಷಜ್ಞಾನ ಹಾಗೂ ಅವನ ಪ್ರಸಾದದಿಂದ ಮಾತ್ರ ಲಭ್ಯ. ಅದಕ್ಕೋಸ್ಕರವಾಗಿಯೇ ಶಾಸ್ತ್ರವು ಹೊರಟಿರುವುದು. ಸಂಸಾರಾವಸ್ಥೆಯಲ್ಲಿ ಜೀವನು ಪ್ರಕೃತಿಯ ಬಂಧನಕ್ಕೊಳಗಾಗಿರುವುದರಿಂದ ತನ್ನ ಆನಂದಾದಿ ಗುಣಗಳನ್ನು ಅನುಭವಿಸದೆಯೇ, ತನ್ನ ಅನಾದಿಕರ್ಮನಿಮಿತ್ತವಾಗಿ ದುಃಖಾದಿಗಳನ್ನು ಹೊಂದುತ್ತಾನೆ. ಸಂಸಾರವಸ್ಥೆಯಲ್ಲಿಯೂ ಜೀವರಿಗೆ ಸುಖದ ಅನುಭವವಾಗುತ್ತದೆ. ಅದು ಹೇಗೆ ಇರುತ್ತದೆ ಎಂದರೆ ಕಜ್ಜಿ (ಚರ್ಮದ ರೋಗ) ತುರಿಸುವಾಗ ದೊರೆಯುವ ಸುಖದಂತೆ ಅದು ತಾತ್ಕಾಲಿಕವಾಗಿ ಆನಂದ ಕೊಡುತ್ತದೆ. ಮುಂದೆ ಕ್ಲೇಶದ ಅನುಭವವಾಗುವುದರಿಂದ, ವೈಷಯಿಕ ಸುಖವು ರಾಜಸ ಸುಖವಾಗಿದೆ. ನಿಷಿದ್ಧ ಕರ್ಮಗಳಾದ ಮದ್ಯಪಾನ, ದ್ಯೂತ, ಕೊಲೆ, ಸುಲಿಗೆ, ಮಾಂಸಭಕ್ಷಣೆ ಇವುಗಳನ್ನು ಆಚರಿಸುವುದರಿಂದ ಬರುವ ಸುಖವು ತಾಮಸ ಸುಖವೆನಿಸುತ್ತದೆ. ಸಾತ್ವಿಕ ಸುಖವು ಆರಂಭದಲ್ಲಿ ಕ್ಲೇಶ, ಕಷ್ಟಗಳೊದಗಿದರೂ ಕೊನೆಗೆ ತೃಪ್ತಿ, ಮನಃಪ್ರಸನ್ನತೆಗಳನ್ನು ನೀಡುವ ತಾತ್ತ್ವಿಕ ಸುಖದ ಕಡೆಗೆ ನಮ್ಮ ಮನಸ್ಸು ಹರಿಯಬೇಕು. ಏಕಾದಶೀ, ಚಾತುರ್ಮಾಸ್ಯಾದಿ ವ್ರತಗಳು ಆಚರಣೆಯ ಆರಂಭದಲ್ಲಿ ಕಷ್ಟವೆನಿಸಿದರೂ, ಅದು ಅಭ್ಯಾಸವಾದಾಗ ಮನಸ್ಸಿನಲ್ಲಿ ಆಚರಣೆಯಿಂದ ಆಗುವ ಆನಂದ ಯಾವುದರಿಂದಲೂ ಪಡೆಯಲು ಸಾಧ್ಯವಿಲ್ಲ. ಇದು ಎಲ್ಲಾ ಸಾತ್ವಿಕರ ಅನುಭವವೂ ಕೂಡಾ. ವೈಷ್ಣವ ವ್ರತಗಳನ್ನು, ಕರ್ಮಗಳನ್ನು ಎಷ್ಟೇ ಕಷ್ಟವೆನಸಿದರೂ ಆಚರಿಸಲು ಪ್ರಯತ್ನಿಸಬೇಕು. ಇವು ಪಾರಲೌಕಿಕ ಸುಖಕ್ಕೆ ಕಟ್ಟಿಟ್ಟ ಗಂಟು.

ನಮ್ಮ ಆತ್ಮದಲ್ಲಿಯೇ ಇರುವ ನೈಜಸುಖದ ಸವಿಯನ್ನು ನಾವು ತಿಳಿಯಲಾರದೆ ಸಂಸಾರದ ಚಕ್ರದಲ್ಲಿ ಬಿದ್ದು ಕೃತ್ರಿಮವಾದ ಸುಖಕ್ಕಾಗಿ ಬಾಯಿ ಬಿಡುವ ನಮ್ಮ ಪ್ರವೃತ್ತಿಗಳನ್ನು ನೋಡಿದಾಗ ಮಹಾಭಾರತದ ಅಶ್ವತ್ಥಾಮರ ಕಥೆಯು ಜ್ಞಾಪಕಕ್ಕೆ ಬರುತ್ತದೆ. ಹಿಟ್ಟಿನ ಹಾಲನ್ನು ನಿಜವಾದ ಹಾಲೆಂದು ತಾಯಿಯಾದ ಕೃಪೀದೇವಿಯು ಕೊಟ್ಟಾಗ, ಅದನ್ನು ಕುಡಿದು ತಾನೂ ಹಾಲನ್ನು ಕುಡಿದೆನೆಂದು ಸಂತೋಷಪಟ್ಟು ಕುಣಿದಾಡುತ್ತಾರೆ. ಅದರಂತೆಯೇ ನಮ್ಮ ಗತಿಯೂ ಕೂಡಾ. ನಿಜವಾದ ಸುಖವನ್ನು ತಿಳಿಯದೆ, ಸಂಸಾರಾವಸ್ಥೆಯಲ್ಲಿ ಕಾಣುವ ಸುಖವೇ ನಿಜವಾದ ಸುಖವೆಂದು ನಂಬಿ, ಭ್ರಾಂತಿಯನ್ನು ಹೊಂದಿದ್ದೇವೆ. ಈ ವಿಷಯವನ್ನೇ ಶ್ರೀವೇದವ್ಯಾಸದೇವರು ಮಹಾಭಾರತದಲ್ಲಿ ಸುಂದರವಾಗಿ ಚಿತ್ರಿಸಿ, ಮನಸ್ಸಿಗೆ ಮುಟ್ಟುವಂತೆ ಮಾಡಿದ್ದಾರೆ. ಅಡವಿಯಲ್ಲಿ ನಡೆಯುತ್ತಿದ್ದ ಒಬ್ಬನನ್ನು ಓಡಿಸಿಕೊಂಡು ಬರುವ ಹುಲಿಗೆ ಹೆದರಿ, ತಪ್ಪಿಸಿಕೊಳ್ಳುವ

ಭರದಲ್ಲಿ ಅನೇಕ ಪೊದರುಗಳಿಂದ ತುಂಬಿದ ಒಂದು ಹಾಳು ಬಾವಿಯಲ್ಲಿ ತಲೆಕೆಳಗಾಗಿ ಬಿದ್ದು ಪೊದರುಗಳಿಗೆ ಸಿಕ್ಕು ಬಾವಿಯ ಮಧ್ಯದಲ್ಲಿಯೇ ತಲೆಕೆಳಗಾಗಿ ಜೋತಾಡುತ್ತಿದ್ದಾಗ, ಕೆಳಗೆ ನೋಡಿದರೆ ಬಾವಿಯ ಪ್ರಪಾತ, ಮೇಲೆ ನೋಡಿದರೆ ಹುಲಿಯ ಆರ್ಭಟ, ಅದು ಅವನನ್ನು ತಿನ್ನಬೇಕೆಂದು ಹೊಂಚುಹಾಕುತ್ತಿದೆ. ಆಶ್ರಯಿಸಿದ ಪೊದರುಗಳು ಶಿಥಿಲವಾಗಿವೆ. ಆ ಹಾಳುಬಾವಿಯಲ್ಲಿದ್ದ ಜೇನುಗೂಡು ಒಡೆದು, ಅನೇಕ ಜೇನುನೊಣಗಳು ಅವನನ್ನು ಕಚ್ಚುತ್ತಿವೆ. ಇಂತಹ ಸನ್ನಿವೇಶದಲ್ಲಿ ಜೇನು ಗೂಡಿನಿಂದ, ಜೇನುತುಪ್ಪದ ಹನಿಗಳು ಇವನ ಬಾಯಿಯೊಳಗೆ ಬಿದ್ದಾಗ, ಈ ಎಲ್ಲಾ ಗಂಡಾಂತರಗಳನ್ನು ಮರೆತು, 'ಜೇನು ಬಹು ರುಚಿಯಾಗಿದೆ' ಎಂದು ಬಾಯಿ ಚಪ್ಪರಿಸುತ್ತಿದ್ದನಂತೆ. ಹೀಗೆ ಈ ಸಂಸಾರದಲ್ಲಿ ಒಂದು ಕಡೆ ಮುಪ್ಪು, ಇನ್ನೊಂದು ಕಡೆ ಮೃತ್ಯು, ಹಾವು, ಹುಲಿಗಳಂತೆ ನಮ್ಮನ್ನು ಆಕ್ರಮಿಸುತ್ತಿದ್ದರೂ, ಆಯುಷ್ಯದ ಪೊದರು ದಿನೇ ದಿನೇ ಕ್ಷೀಣವಾಗುತ್ತಿದ್ದರೂ, ಸಂಸಾರದ ತಾಪತ್ರಯಗಳು ಜೇನು ನೊಣಗಳಂತೆ ಪದೇ ಪದೇ ಕಚ್ಚುತ್ತಿರುತ್ತವೆ. ಆ ಜೇನುಗೂಡಿನಿಂದ ಬೀಳುವ ಹನಿಗಳಂತಿರುವ ಸಂಸಾರದ ಅಲ್ಪಸುಖಗಳನ್ನೇ ಸವಿಯುತ್ತಾ, ನಾವು ಮರಣವನ್ನು ಹೊಂದಿದ ಮೇಲೆ, ಮುಂದೆ ನರಕಾದಿ ಅನರ್ಥಗಳನ್ನು ಹೊಂದಬೇಕಾಗುತ್ತದೆ ಎನ್ನುವುದನ್ನು ಮರೆತು, ಸಂಸಾರದಲ್ಲಿಯೇ 'ನಾನು', 'ನನ್ನದು' ಎನ್ನುವ ಅಹಂಕಾರ, ಮಮಕಾರಗಳಿಗೆ ಒಳಗಾಗಿದ್ದೇವೆ. ವಿವೇಕಿಯಾದವನು ಈ ಸಾಂಸಾರಿಕ ಸುಖವು ಹೇಯ, ಅನಿತ್ಯ, ತುಚ್ಛವೆಂದು ಶಾಸ್ತ್ರದಿಂದ ತಿಳಿದವನಾಗಿ, ಯೋಗ್ಯ ಗುರುಗಳನ್ನು ಆಶ್ರಯಿಸಿ, ಅವರಿಂದ ಉಪದೇಶವನ್ನು ಪಡೆದು, ಆತ್ಮೋದ್ಧಾರಕ್ಕಾಗಿ ಪ್ರಯತ್ನಿಸಬೇಕು. ನಿಷ್ಕಾಮನೆಯಿಂದ ವಿಹಿತ ಕರ್ಮಾನುಷ್ಠಾನಗಳನ್ನು ಶ್ರೀವಿಷ್ಣುಪ್ರೀತ್ಯರ್ಥವಾಗಿ ಆಚರಿಸಿ, ಗುರುಗಳ ದ್ವಾರಾ ಭಗವಂತನಿಗೆ ಸಮರ್ಪಿಸಬೇಕು. ಆ ಕರ್ಮಾಚರಣೆಗಳಿಂದ ಅಂತಃಕರಣಶುದ್ಧಿಯಾಗಿ ಶಾಸ್ತ್ರಪರೋಕ್ಷವನ್ನು ಪಡೆದು, ಅನೇಕ ಜನ್ಮಗಳ ಸಾಧನದಿಂದ ಭಗವಂತನ ದರ್ಶನವನ್ನು ಪಡೆಯುತ್ತೇವೆ. ನಂತರ ಅವನ ಪ್ರಸಾದದಿಂದ ಆ ಸಾತ್ವಿಕ ಜೀವನ ಆನಂದವು ಅಭಿವ್ಯಕ್ತವಾಗಿ, ಶಾಶ್ವತವಾದ ಸುಖವು ಪ್ರಾಪ್ತವಾಗುತ್ತದೆ. ಇದನ್ನೇ ಶ್ರೀವ್ಯಾಸರಾಯರು ತಮ್ಮ 'ನವರತ್ನಮಾಲಿಕಾ' ಸ್ತೋತ್ರದಲ್ಲಿ ''ಮುಕ್ತಿಃ ನೈಜಸುಖಾನುಭೂತಿಃ'' ಎಂದು ವರ್ಣಿಸಿದ್ದಾರೆ.

❑❑





## SMS ಸ್ಪಂದನ ಸ್ಪಂದನ ಸ್ಪಂದನ

ನಿಮ್ಮ ಅಭಿಪ್ರಾಯಗಳನ್ನು **SMS** ಮೂಲಕ ನಮಗೆ ತಿಳಿಸಬಹುದೆಂದು ನಾವು ಕರೆಯಿತ್ತಾಗ ಅದಕ್ಕೆ ಸ್ಪಂದಿಸಿದ ಸದಸ್ಯರುಗಳ **SMS** ಗಳನ್ನು ಇಲ್ಲಿ ಅನಾವರಣಗೊಳಿಸುತ್ತಿದ್ದೇವೆ. ನಿಮ್ಮಿಂದ ಇನ್ನೂ ಹೆಚ್ಚಿನ ಸ್ಪಂದನವನ್ನು ಪತ್ರಿಕೆಯು ನಿರೀಕ್ಷಿಸುತ್ತದೆ.

1. **Kalaam Sanchike chennagi moodibandide. Sanchikeyu sangraha yogya, vandanegalu....**
   **D.K. Srinivas,** Advocate, Bellary — Mobile No. : 9845866411
   Dt. 12-03-2007 — Time : 05 : 00 p.m.
2. **Visit of Hon'ble President of India to Mantralaya is appreciable Gururaghavendra may bless him wish him best wishes for future**
   Mobile No. : 9860106540 — Dt. 24-03-2007 — Time : 11 : 47 a.m.
3. **Sir, I am delighted to see GS of March 2007. Photos on coverpage are very good and worth preserving. Thanks for the highly informative editorial.**
   Mobile No. : 9448276868 — Dt. 30-03-2007 — Time : 08 : 20 p.m.
4. **Series on Geeta Vivruti is really great. I was craving to read the book in Kannada form since many years.**
   **Dr. Prahallad Chebbi,** Mobile No. : 9945597934
   Dt. 03-04-2007 — Time : 08 : 51 p.m.
5. **80 ra dashakada chitra super. Hale nenapugaladavu. Innistu Chitragalanu nodabayasuve.**
   **S.R. Ramachandra Rao,** Dharmavaram — Mobile No. : 9885387754
   Dt. 14-04-2007 — Time : 08 : 12 p.m.
6. **Book is nice, it is helpful to all madhwa people.**
   **Viditha Vadiraj,** Bellary — Mobile No. : 9480005108
   Dt. 16-04-2007 — Time : 04 : 39 p.m.
7. **Plz. Sir I want d information about d word Bandurgururahmsakhe. Because I am the eager reader of SGSM Masapathrike on dis occassion d info urs respectively.**
   **Ramakrishna** — Mobile No. : 9886971535
   Dt. 17-04-2007 — Time : 05 : 51 p.m.
8. **Gurusarvabhouma Masikadalli navagraha devarugala bagge lekhanagalu tumba upayuktavagive. Dhanyavadagalu.**
   **Venkatesh Navaratna,** Bangaore — Mobile No. : 9901896945
   Dt. 17-04-2007 — Time : 11 : 11 p.m.

(ಇನ್ನಷ್ಟು SMS ಗಳು ಮುಂದಿನ ಸಂಚಿಕೆಯಲ್ಲಿ)

ಲೇಖನಾಂಕ

# ತಮಿಳುನಾಡಿನ ನವಗ್ರಹ ದೇವಾಲಯಗಳು – ೬

■ ಸಂಗ್ರಹ : **ಸೂರೀಂದ್ರ**
ಬೆಂಗಳೂರು

**ಗ್ರ**ಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭ-ವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿ-ಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ''ತಮಿಳುನಾಡಿನ ನವಗ್ರಹ ದೇವಸ್ಥಾನಗಳು'' ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳ ಬಗ್ಗೆ, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ - ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿ-ಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನ-ಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448.**

## 6. ಶುಕ್ರ

ಕುಂಭಕೋಣದಿಂದ ಪೊಂದನಲ್ಲೂರು ರಸ್ತೆಯಲ್ಲಿ ಕ್ರಮಿಸಿ, ಮುಂದೆ ನಡೆದರೆ ಕದಲೀಮಂಗಲಂ ಊರು ಸಿಗುವುದು. ಅದನ್ನು ದಾಟಿ ಮುನ್ನಡೆದಾಗ ಸಿಗುವುದೇ ಕಾಂಜನೂರು. ಕಾಂಜನೂರಿನ ದೇವಸ್ಥಾನಕ್ಕೆ ಹೋಗುವಾಗ ಎಡ-ಬಲಗಳಲ್ಲಿ



ಅಗ್ರಹಾರದಂತಿರುವ ಮನೆಗಳನ್ನು ದಾಟಿ ಹೋಗಬೇಕು. ನಂತರ ನಮಗೆ ಎದುರಾಗುವುದು ಪುರಾತನ ದೇವಸ್ಥಾನ ಇದರ ಬಲಭಾಗದಲ್ಲಿ ವಿನಾಯಕ - ಸುಬ್ರಹ್ಮಣ್ಯರ ದೇವಸ್ಥಾನ-ಗಳೂ ಇವೆ. ಕಾಳಹಸ್ತಿಯಲ್ಲಿ ರಾಹು-ಕೇತುವೆಂದು ಶಿವನಿಗೆ ಪೂಜೆ ಸಲ್ಲಿಸುವಂತೆ ಇಲ್ಲಿಯೂ ಕೂಡಾ ಅಗ್ನೀಶ್ವರನನ್ನು ಶುಕ್ರನೆಂದು ಭಾವಿಸಿ ಪೂಜೆ ನಡೆಯುತ್ತದೆ. ಶುಕ್ರನಿಗೆ ಪ್ರತ್ಯೇಕವಾದ ಗರ್ಭಗುಡಿ ಇರುವುದಿಲ್ಲ. ಈ ಕ್ಷೇತ್ರದಲ್ಲಿ ಅಗ್ನಿತೀರ್ಥ, ಪರಾಶರತೀರ್ಥವೆಂದು ಎರಡು ಪುಷ್ಕರಣಿಗಳಿವೆ.

### ಶುಕ್ರದೋಷ ಪರಿಹಾರ


ಈತನು ತುಲಾರಾಶಿಗೆ ಅಧಿಪತಿಯು. ಶುಕ್ರನ ಚಲನೆಯ ಅವಧಿ ೨೦ ವರ್ಷಗಳು. ಶುಕ್ರದೋಷ ಪರಿಹಾರಕ್ಕಾಗಿ ಬಿಳಿಯ ಉಡುಪುಗಳನ್ನು ದಾನ ನೀಡುವುದರಿಂದ ಬೆಳ್ಳಿ ಮತ್ತು ಕಡಲೇಬೇಳೆ ದಾನಮಾಡುವುದರಿಂದ ಶುಕ್ರದೋಷ-ವನ್ನು ಪರಿಹಾರಮಾಡಿಕೊಳ್ಳಬಹುದು.

## ಸಾದರ ಸ್ವೀಕಾರ

| | | |
|---|---|---|
| ಪುಸ್ತಕದ ಹೆಸರು | : | 'ಶ್ರೀದ್ವಾದಶಸ್ತೋತ್ರ - ಚಿಂತನ-ಮಂಥನ' |
| ಸಂಪಾದಕರು | : | ಶ್ರೀನಿವಾಸ ಸು. ಮಠದ |
| ಪ್ರಕಾಶಕರು | : | ಗೀತಾ ಪ್ರಕಾಶನ, ಅಜರೇಕರ ಚಾಳ, ಬಿಜಾಪುರ<br>ದೂ. 08352-258362 |
| ಬೆಲೆ | : | ಇಪ್ಪತ್ತು ರೂ.ಗಳು. |

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಕೃತಿಗಳಲ್ಲಿ 'ದ್ವಾದಶಸ್ತೋತ್ರ'ವು ಅಪೂರ್ವವಾದುದು. ಈ ದ್ವಾದಶಸ್ತೋತ್ರದ ಹನ್ನೆರಡು ಅಧ್ಯಾಯಗಳ ಚಿಂತನೆ-ಯನ್ನು ಹಾಗೂ ಅವುಗಳಲ್ಲಿ ಬರುವ ವಿಶೇಷಣವನ್ನು, ಸ್ತೋತ್ರದ ಮಹಿಮೆ, ರಚನೆಯ ಹಿನ್ನೆಲೆ, ಮಂಗಳಾಚರಣದ ವೈಶಿಷ್ಟ್ಯ, ಭಗವಂತನ ಸ್ಮರಣೆ, ಕರ್ಮಮೀಮಾಂಸಾ, ಜಗತ್ಸೃಷ್ಟಿ, ಪಂಚಭೇದಗಳು, ತಾರತಮ್ಯ, ಕರ್ಮಸಮರ್ಪಣೆ, ಭಕ್ತಿ-ಮುಕ್ತಿ, ಮುಂತಾದ ವಿಷಯಗಳನ್ನು ಶ್ರೀಶ್ರೀನಿವಾಸ ಸು. ಮಠದರವರು ತಮ್ಮ ಚಿಂತನ-ಮಂಥನದಿಂದ ಅತ್ಯಂತ ವಿಹಂಗಮವಾಗಿ ನಿರೂಪಿಸಿದ ಕೃತಿಯಿದು.ಈ ಕೃತಿಯಿಂದ ದ್ವಾದಶಸ್ತೋತ್ರವನ್ನು ಅಭ್ಯಸಿಸುವವರಿಗೆ ಮತ್ತಷ್ಟು ಮಾಹಿತಿಗಳು ದೊರಕುವುದಂತೂ ಖಂಡಿತ. ಇದೊಂದು ಸಂಗ್ರಹಯೋಗ್ಯವಾದ ಕೃತಿಯಾಗಿದೆ ಹಾಗೂ ಸಂಪಾದಕರ ಈ ಹಿಂದಿನ ಇಪ್ಪತ್ಮೂರು ಕೃತಿಗಳಿಗೆ ಮತ್ತೊಂದು ಸೇರ್ಪಡೆಯಂತಾಗಿದೆ.

– ಸಂ.




ನಿಮ್ಮ ತರ್ಕಕ್ಕಾಗಿ

ಇದೊಂದು ಹೊಸ ಕಾಲಂ. ಸಮಾಜದಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಕುರಿತ ಲೇಖನಗಳ ಬಗೆಗಿನ ಒಂದು ಇಣುಕುನೋಟ ಇದಾಗಿದೆ. ಇದನ್ನು ವಿಮರ್ಶಿಸುವ, ಪರಾಂಬರಿಸುವ ಯುಕ್ತಿ ನಿಮ್ಮದಾಗಿದೆ. ಈ ಲೇಖನವು 'ಸೇತು ಸಮುದ್ರಂ' ಕುರಿತು ದಿನಪತ್ರಿಕೆಗಳಲ್ಲಿ, ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳ ಆಧಾರಿತವಾಗಿದೆ.

– ಸಂ.

## ರಾಮಸೇತುವೆ – ಸೇತುಸಮುದ್ರಂ : ಒಂದು ವಿವೇಚನೆ

**ಭಾ**ರತ ಹಾಗೂ ಶ್ರೀಲಂಕಾ ನಡುವಿನ ಸಮುದ್ರ ಪ್ರದೇಶವನ್ನು ಸೇತುಸಮುದ್ರಂ ಎನ್ನಲಾಗುತ್ತಿದೆ. ತ್ರೇತಾಯುಗದಲ್ಲಿ ಸೀತಾಪಹರಣದ ಸಂದರ್ಭ ರಾಮೇಶ್ವರದಿಂದ ಲಂಕೆಗೆ ತೆರಳಲು ಇದೇ ಮಾರ್ಗವಾಗಿ ಸೇತುವೆ ನಿರ್ಮಿಸಲಾಗಿತ್ತೆಂಬ ಪ್ರತೀತಿಯೂ ಇದೆ. ಇದನ್ನು ಶ್ರೀರಾಮ ಸೇತುವೆ ಎಂದೂ ಹೇಳಲಾಗುತ್ತದೆ. ಸೇತುಸಮುದ್ರ ಹೆಚ್ಚು ಆಳವಿಲ್ಲ. ಬಹುತೇಕ ಭಾಗಗಳಲ್ಲಿ ನೀರಿನ ತಳ ಕೇವಲ ೧೦ ಮೀಟರ್‌ನಲ್ಲೇ ಇದೆ. ಕಲ್ಲುಗಳಿಂದ ಕೂಡಿದೆ.

ರಾಮಸೇತು ೩೫೦೦ ವರ್ಷಗಳಷ್ಟು ಹಳೆಯದಿರಬಹುದು ಎಂದು ತಿರುಚ್ಚಿಯ ಭಾರತೀದಾಸನ್ ವಿ.ವಿ. ಯಲ್ಲಿರುವ ಸೆಂಟರ್ ಫಾರ್ ರಿಮೋಟ್ ಸೆನ್ಸಿಂಗ್ (ಸಿಆರ್‌ಎಸ್) ದೃಢಪಡಿಸಿದೆ. ೧೫ ನೇ ಶತಮಾನದಲ್ಲಿ ಈ ಸೇತುವೆ ಮೂಲಕ ನಡಿಗೆ ಸಾಧ್ಯವಿತ್ತು. ಕ್ರಿ.ಶ. ೧೪೮೦ ರಲ್ಲಿ ಸೇತುವೆ ಮುರಿದುಬಿತ್ತೆಂದು ಹೇಳಲಾಗುತ್ತಿದೆ.

ರಾಮಾಯಣದ ಪ್ರಕಾರ, ಶ್ರೀರಾಮನ ವಾನರಸೈನ್ಯ ಸಾವಿರಾರು ವರ್ಷಗಳ ಹಿಂದೆ ರಾಮೇಶ್ವರದಿಂದ ಶ್ರೀಲಂಕಾಕ್ಕೆ ಸೇತುವೆ ನಿರ್ಮಿಸಿತ್ತೆನ್ನಲಾಗುತ್ತಿದೆ. ಭಾರತ ಸರಕಾರದ ಉದ್ದೇಶಿತ ಯೋಜನೆಯಿಂದ ರಾಮಸೇತುವಿನ ಪ್ರಾಚ್ಯವಸ್ತು ಪಳೆಯುಳಿಕೆಯನ್ನು ಹಾನಿಪಡಿಸಿದಂತಾಗುತ್ತದೆ ಎಂಬ ಕಾರಣಕ್ಕಾಗಿ ಕೆಲ ಹಿಂದೂ ಸಂಘಟನೆಗಳು ಹಾಗೂ ಪುರಿ ಶಂಕರಾಚಾರ್ಯ ಸೇರಿದಂತೆ ಕೆಲ ಧಾರ್ಮಿಕ ನಾಯಕರು ಸೇತುಸಮುದ್ರಂ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಮತ್ತೆ ಕೆಲ ಪರಿಸರ ಸಂಘಟನೆಗಳು ಕರಾವಳಿ ಜಿಲ್ಲೆಯ ಸುಮಾರು ೨ ಕೋಟಿ ಮೀನುಗಾರರ ಜೀವನಕ್ಕೆ ಸಂಚಕಾರ ಬರಲಿದೆ ಎಂದೂ ವಾದಿಸುತ್ತಿವೆ.



ಸೇತುಸಮುದ್ರಂ ಹಡಗು ಕಾಲುವೆಯನ್ನು ಪಾಕ್ ಜಲಸಂಧಿಯ ಅಡ್ಡಕ್ಕೆ ನಿರ್ಮಿಸಲು ಉದ್ದೇಶಿಸಲಾಗಿದೆ. ಧನುಷ್ಕೋಟಿ ಬಳಿ ಸಮುದ್ರದ ತಳವನ್ನು ಮತ್ತಷ್ಟು ಆಳಗೊಳಿಸಿ ಹಡಗುಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವುದು ಯೋಜನೆಯ ಗುರಿ. ಆಳ ಕಡಿಮೆ ಇರುವ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಬೃಹತ್ ಹಡಗು ಸಂಚಾರ ಸಾಧ್ಯವಿಲ್ಲ. ಈಗ ಹಡಗುಗಳು ಶ್ರೀಲಂಕಾ ದ್ವೀಪವನ್ನು ಸುತ್ತು ಹಾಕಿಕೊಂಡು ಬರಬೇಕಿದೆ. ಇದಕ್ಕಾಗಿ ೩೦ ತಾಸುಗಳ ಹೆಚ್ಚುವರಿ ಅವಧಿ ಹಿಡಿಯುತ್ತದೆ. ಭಾರತದ ಕರಾವಳಿಯಲ್ಲಿ ಸಂಚರಿಸುವ ಹಡಗುಗಳು ೬೫೦ ಕಿ.ಮೀ. ದೂರವನ್ನು ಉಳಿಸಬಹುದು. ಈ ಭಾಗದಲ್ಲಿ ಸಮುದ್ರದ ಆಳ ಕೇವಲ ೩ ರಿಂದ ೩೦ ಅಡಿಗಳು ಮಾತ್ರ. ಸೇತುವೆ ಉದ್ದ ೪೮ ಕಿ.ಮೀ.ಗಳು.

ರಾಮಸೇತುವಿನ ಅಪರೂಪವಾದ ಚಿತ್ರವನ್ನು ಇತ್ತೀಚೆಗೆ ನಾಸಾ ಬಿಡುಗಡೆಗೊಳಿಸಿತ್ತು. ಜತೆಗೆ ಈ ಸ್ಥಳದಲ್ಲಿ ಸೇತುವೆ ಇತ್ತು ಎಂಬುದಕ್ಕೆ ಪುರಾತತ್ವ ದಾಖಲೆಗಳೂ ಸಾಕ್ಷಿಯಾಗಿವೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾದ ಈ ಸೇತುವೆಯನ್ನು ರಕ್ಷಿಸುವುದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯ. ಈ ದಿಸೆಯಲ್ಲಿ ಈಗಾಗಲೇ ಅನೇಕ ಧಾರ್ಮಿಕ ಗುರುಗಳು ತಮ್ಮ ಆಂದೋಲನವನ್ನು ಪ್ರಾರಂಭಿಸಿದ್ದಾರೆ. ಭಾರತೀಯರ ಧಾರ್ಮಿಕ ಮನೋಭಾವಕ್ಕೆ ಪೆಟ್ಟುಬಿದ್ದಾಗಲೆಲ್ಲಾ ಅವುಗಳನ್ನು ಸರಿಪಡಿಸುವ ಜವಾಬ್ದಾರಿ ಧರ್ಮಪೀಠಗಳ ಮೇಲಿದೆ. ಸಾಂಸ್ಕೃತಿಕ ಪರಂಪರೆಯನ್ನು ಹಾಳುಗೆಡವಿ ಹಣ ಸಂಪಾದಿಸುವ ಗುರಿ ಹೊಂದಿರುವ ಪಟ್ಟಭದ್ರ ಹಿತಾಸಕ್ತಿಗಳು ಭಾರತದ ಇತಿಹಾಸವನ್ನು ಒಮ್ಮೆ ಪರಾಂಬರಿಸಲಿ.

### ರಾಮಸೇತುವೆಗೆ ಧಕ್ಕೆಯಾದರೆ ನೇರ ಹೋರಾಟ

ರಾಮೇಶ್ವರದ ರಾಮಸೇತುವೆಯನ್ನು ನಾಶಪಡಿಸಲು ಯತ್ನಿಸಿದಲ್ಲಿ, ನೇರ ಹೋರಾಟ ಆರಂಭಿಸಲಾಗುವುದು ಎಂದು ಬದರಿಯ ರೂಪಾನಂದ ಸರಸ್ವತೀ ಮಹಾರಾಜರವರು ಎಚ್ಚರಿಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಸಭೆ ಸೇರಿದ ಶಂಕರಾಚಾರ್ಯರಿಂದ ಸ್ಥಾಪಿತವಾದ ಚತುರಾಮ್ನಾಯ ಪೀಠಾಧೀಶರು ಒಮ್ಮತದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈ ಸೇತುವೆ ಹೋದರೆ ಅರಬ್ಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿಗಳು ಮಿಲನಗೊಂಡು, ಇಲ್ಲಿಯ ಮೂರು ಸಾವಿರ ಜಾತಿಯ ಜಲಚರಗಳಿಗೆ ತೊಂದರೆಯಾಗುತ್ತದೆ ಹಾಗೂ ಸುನಾಮಿಯಾಗುವ ಸಂಭವವೂ ಹೆಚ್ಚು ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ರಾಷ್ಟ್ರಪತಿಗಳು ಗಮನಹರಿಸಿ ತಮ್ಮ ಹುಟ್ಟೂರಾದ ರಾಮೇಶ್ವರಂ ಬಗ್ಗೆ ಹಾಗೂ ಈ ಸಾಂಸ್ಕೃತಿಕ ಪರಂಪರೆಯ ಸೇತುವೆಯ ಬಗ್ಗೆ ಸೂಕ್ತ ಸಲಹೆ ನೀಡಬೇಕು ಎಂದು ಒತ್ತಾಯಿಸಿದರು.

### ಸೇತುಸಮುದ್ರಂ ತಡೆಗೆ ಸುಪ್ರೀಂ ಕೋರ್ಟ್ ನಕಾರ

ಶ್ರೀರಾಮ ನಿರ್ಮಿಸಿದ್ದಾಗಿ ನಂಬಲಾಗಿರುವ ರಾಮಸೇತುವೆಯನ್ನು ನಾಶಪಡಿಸುವ ಸೇತುಸಮುದ್ರಂ ನೌಕಾ ಕಾಲುವೆ ಯೋಜನೆಯ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಲು

ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಶಂಕರಾಚಾರ್ಯ ಸ್ವಾಮೀಜಿ, ವಿದ್ಯಾನಂದ ಭಾರತೀ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮೇ ೨೮ ಕ್ಕೆ ಮಾಡುವುದಾಗಿ ನಿಗದಿಪಡಿಸಿದೆ. ರಾಮಸೇತುವನ್ನು ಸಂರಕ್ಷಿತ ಸ್ಮಾರಕವಾಗಿ ಘೋಷಿಸಿ ವಿಶ್ವಪರಂಪರೆ ಎಂದು ಘೋಷಿಸಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲಾಗಿದೆ.

❑❑

## ರಾಮನ ಸೇತುವೆ ಸ್ಮಾರಕವಾಗಿ ಉಳಿಯಲಿ

ವಿಚಾರವಾದಿಗಳು ತಮ್ಮ ಲೇಖನಗಳಲ್ಲಿ ಭಾರತದ ಐತಿಹಾಸಿಕ ಪರಂಪರೆಯನ್ನು ಮತ್ತು ಜನರ ಪವಿತ್ರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಲೇಖನವನ್ನು ಹೊರ-ಹೊಮ್ಮಿಸಬೇಕೇ ಹೊರತು ಭಾರತೀಯ ಮನೋಭಾವಕ್ಕೆ ಪೆಟ್ಟು ಕೊಡುವ ಲೇಖನಗಳನ್ನು ಎಂದೂ ಬರೆಯಬಾರದು. ಕೆಲವು ಪತ್ರಿಕೆಗಳ ಪ್ರಕಾರಗಳಲ್ಲಿ ಪ್ರಕಟವಾದ ಲೇಖನಗಳ ಪ್ರಕಾರ ಇದೊಂದು ಕಟ್ಟುಕಥೆ- ಯೆಂದೂ, ಈಜಿಪ್ಟ್ ದೇಶದಲ್ಲಿ ಪಿರಮಿಡ್ ಕಟ್ಟಲು ಇಪ್ಪತ್ತರಿಂದ ಐವತ್ತು ವರ್ಷಗಳ ಕಾಲ ಲಕ್ಷಗಟ್ಟಲೇ ಗುಲಾಮರು ದುಡಿದು ಕಟ್ಟುತ್ತಿದ್ದರು, ಆದರೆ ೬೦ ಮೈಲು ಆಳದ ೩೫ ಕಿ.ಮೀ. ಉದ್ದದ ಸೇತುವೆಯನ್ನು ವಾನರರು ಕಟ್ಟಲು ಸಾಧ್ಯವೇ ಎಂದು ಕುಯುಕ್ತಿ ಮಾಡಿರುವುದು ಶೋಚನೀಯ. ಹವಾಮಾನದ ವೈಪರೀತ್ಯ-ದಿಂದ, ಸುನಾಮಿ ಅಥವಾ ಸಮುದ್ರದ ಕೊರೆತದಿಂದ ಇದು ಉಂಟಾಗಿರಬಹುದೆಂದು ಬರೆದಿದ್ದಾರೆ. ಭಾರತೀಯ ಭವ್ಯ ಪರಂಪರೆಯನ್ನು ಬಿಂಬಿಸುವ ವ್ಯಕ್ತಿಯ ಸಮಗ್ರ ಚಿತ್ರಣ-ವನ್ನು ನೀಡುವ ರಾಮಾಯಣದಂತಹ ಮಹಾಕಾವ್ಯದ ಬಗ್ಗೆ ಸತ್ಯ - ಅಸತ್ಯಗಳ ಅನುಮಾನವನ್ನು ವ್ಯಕ್ತಪಡಿಸುವ ಬದಲಾಗಿ ಸ್ಮಾರಕವನ್ನು ಉಳಿಸುವ ಸಂರಕ್ಷಿಸುವ ಕಾರ್ಯಕ್ಕೆ ನಾವೆಲ್ಲರೂ ಒಕ್ಕೊರಲಿನಿಂದ ದನಿಗೂಡಿಸಿ ಕಾರ್ಯತತ್ಪರರಾಗೋಣ.

**- ರಾಜಾ. ಎಸ್. ರಾಜಗೋಪಾಲಾಚಾರ್ಯ**

**ಕ್ಷಣಂ ಬಾಲೋ ಭೂತ್ವಾ ಕ್ಷಣಮಪಿ ಚ ಯುವಾ ಕಾಮರಸಿಕಃ**
**ಕ್ಷಣಂ ವಿತ್ತೈರ್ಹೀನಃ ಕ್ಷಣಮಪಿ ಚ ಸಂಪೂರ್ಣವಿಭವಃ ।**
**ಜರಾಜೀರ್ಣೈರಂಗೈರ್ನಟ ಇವ ವಲೀಮಂಡಿತತನುಃ**
**ನರಃ ಸಂಸಾರಾಂತೇ ವಿಶತಿ ಯಮಧಾನೀಯವನಿಕಾಮ್ ॥**

ಒಂದು ಸ್ವಲ್ಪಕಾಲ ಹುಡುಗನಾಗಿ, ಆಮೇಲೆ ಸ್ವಲ್ಪಕಾಲ ಯುವಕನಾಗಿ ಕಾಮಗಳನ್ನು ಅನುಭವಿಸಿ, ಅನಂತರ ಸ್ವಲ್ಪದಿನಗಳು ಹಣವಿಲ್ಲದೆಯೂ, ಸ್ವಲ್ಪದಿನಗಳು ಸಂಪೂರ್ಣ ಧನಿಕನಾಗಿ, ಮುಪ್ಪಿನಿಂದ ಸೊರಗಿದ ಸುಕ್ಕುಹಿಡಿದ ದೇಹವುಳ್ಳವನಾಗಿ, ರಂಗಸ್ಥಲದ ಮೇಲೆ ಬರುವ ನಟನಂತೆ ಮನುಷ್ಯನು ಸಂಸಾರದ ಕೊನೆಯಲ್ಲಿ ಯಮಪುರಿಯ ತೆರೆಯೊಳಗೆ ಮರೆಯಾಗುತ್ತಾನೆ.

**- ಸುಭಾಷಿತಮಂಜರೀ**



# ಪರ್ಯಟನ

## ಮಂತ್ರಾಲಯದಲ್ಲಿ ಮುಖ್ಯಮಂತ್ರಿ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ದಂಪತಿ ಸಮೇತರಾಗಿ ಶ್ರೀಕ್ಷೇತ್ರ ಮಂತ್ರಾಲಯಕ್ಕೆ ಆಗಮಿಸಿ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರ ದರ್ಶನ ಪಡೆದರು. ಇದಕ್ಕೆ ಪೂರ್ವಭಾವಿಯಾಗಿ ಮುಖ್ಯಮಂತ್ರಿಗಳನ್ನು ಶ್ರೀಮಠದ ಧರ್ಮಾಧಿಕಾರಿಗಳಾದ ರಾಜಾ. ಬಂಡಾಚಾರ್ಯರು ಮಹಾದ್ವಾರದಲ್ಲಿ ಪೂರ್ಣಕುಂಭದೊಡನೆ ಸ್ವಾಗತಿಸಿದರು. ನಂತರ ಮಹಾಪ್ರಾಕಾರವನ್ನು ಪ್ರವೇಶಿಸಿದ ಮುಖ್ಯಮಂತ್ರಿಗಳು ಪ್ರದಕ್ಷಿಣಾಕಾರವಾಗಿ ಬಂದು ಉಭಯ ಶ್ರೀಪಾದಂಗಳವರ ದರ್ಶನವನ್ನು ಪಡೆದರು. ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ಮುಖ್ಯಮಂತ್ರಿ-ಗಳಿಗೆ ರಾಯರ ವಸ್ತ್ರ ಹೊದಿಸಿ, ಜರಿಪೇಟ ತೊಡಿಸಿ ಬೆಳ್ಳಿಯ ರಾಯರ ಭಾವಚಿತ್ರವನ್ನು ನೀಡಿ ಆಶೀರ್ವದಿಸಿದರು. ನಂತರ ಮುಖ್ಯಮಂತ್ರಿಯವರನ್ನು ರಾಯರ ಮೂಲಬೃಂದಾವನದ ಮುಂಭಾಗಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಸ್ವಲ್ಪ ಸಮಯದ ಕಾಲ ಧ್ಯಾನದಲ್ಲಿ ತಲ್ಲೀನರಾದ ಮುಖ್ಯಮಂತ್ರಿಗಳು ರಾಯರಲ್ಲಿ ಪ್ರಾರ್ಥನೆ ಸಲ್ಲಿಸಿ, ಆರತಿಯನ್ನು ನೆರವೇರಿಸಿದರು. ಪತ್ರಿಕಾ ಮಾಧ್ಯಮದವರು ಮುಖ್ಯಮಂತ್ರಿಯವರನ್ನು ಸುತ್ತುವರಿದು ತಮ್ಮ ಈ ಭೇಟಿಯ ಬಗ್ಗೆ ವಿಚಾರಿಸಿದಾಗ ಮುಖ್ಯಮಂತ್ರಿಯವರು ತಾವು ಮೊದಲಿನಿಂದಲೂ ರಾಯರ ಪರಮಭಕ್ತ-ರಾಗಿದ್ದು, ಬೆಂಗಳೂರಿನಲ್ಲಿರುವ ಶಾಖಾಮಠಕ್ಕೆ ಪ್ರತಿ ಗುರುವಾರವೂ ದಂಪತಿ ಸಮೇತರಾಗಿ ಭೇಟಿ ನೀಡುತ್ತಿದ್ದುದನ್ನು ಸ್ಮರಿಸಿಕೊಂಡು ಶ್ರೀಸುಶಮೀಂದ್ರತೀರ್ಥರ ಮುಗ್ಧತೆ, ಅವರ ನಗು ಸದಾಕಾಲವೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ತಿಳಿಸಿದರು.

## ಗಂಗಾವತಿಯಲ್ಲಿ ಶ್ರೀಸುಶಮೀಂದ್ರತೀರ್ಥರಿಗೆ ರಜತ ತುಲಾಭಾರ

ಮಂತ್ರಾಲಯ ಮಠಾಧೀಶರಾದ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರಿಗೆ ಗಂಗಾವತಿಯಲ್ಲಿ ಭಕ್ತರೊಬ್ಬರು ರಜತ ತುಲಾಭಾರವನ್ನು ನೆರವೇರಿಸಿದರು. ತಾವು ನೆನೆಸಿದ ಕಾರ್ಯವು ಫಲಿಸಿದಲ್ಲಿ ಶ್ರೀಗಳವರಿಗೆ ರಜತ ತುಲಾಭಾರ ನೆರವೇರಿಸುವುದಾಗಿ ಸಂಕಲ್ಪಿಸಿದ ಭಕ್ತರೊಬ್ಬರು ಈ ತುಲಾಭಾರವನ್ನು ಅತ್ಯಂತ ಭಕ್ತಿ-ಶ್ರದ್ಧೆಗಳಿಂದ ನೆರವೇರಿಸಿದರು. ಇದಕ್ಕೆ ಮುಂಚಿತವಾಗಿ ಗಂಗಾವತಿಯ ರಾಜಬೀದಿಗಳಲ್ಲಿ ಉಭಯ ಶ್ರೀಪಾದಂಗಳವರು ಮೆರವಣಿಗೆಯ ಮೂಲಕ ಸಭಾಭವನಕ್ಕೆ ಕರೆತರಲಾಯಿತು. ಈ ಮೆರವಣಿಗೆಯಲ್ಲಿ ಅನೇಕ ವಾದ್ಯಮೇಳ-ಗಳು, ಬಾಣ-ಬಿರುಸುಗಳು, ಭಜನಮಂಡಲಿಗಳು, ದಾಸಕೂಟಗಳು ಭಾಗವಹಿಸಿದ್ದುದು ವಿಶೇಷವಾಗಿತ್ತು. ರಜತ ತುಲಾಭಾರದೊಂದಿಗೆ ನಾಣ್ಯದ ತುಲಾಭಾರವನ್ನು ಕೂಡಾ ನೆರವೇರಿಸಲಾಯಿತು.

**ವರದಿ : ಸೂರೀಂದ್ರ**